ಶ್ರೀ

ಅಭಿಷೇಕ ನಾಟಕ

ಭಾಸ ಮಹಾಕವಿ

ಅನುವಾದಕ:

ಪಂಡಿತ ಬಿ. ನಂಜುಂಡಸ್ವಾಮಿ

ಭಾಸ ಮಹಾಕವಿಯ

ಅಭಿಷೇಕ ನಾಟಕ

ಅನುವಾದಕರು:
ಪಂಡಿತ ಬಿ. ನಂಜುಂಡಸ್ವಾಮಿ,
ಕನ್ನಡ ಪಂಡಿತ, ಮದ್ರಾಸ್ ಗೌರ್ನ್‌ಮೆಂಟ್ ಓರಿಯಂಟಲ್
ಮ್ಯಾನುಸ್ಕ್ರಿಪ್ಟ್ ಲೈಬ್ರರಿ, ಎಗ್ಮೋರ್, ಮದ್ರಾಸು.

ಪ್ರಕಾಶಕರು:
ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ, ಉಡುಪಿ.

ಶ್ರೀಕೃಷ್ಣಮುದ್ರಣಾಲಯ, ಉಡುಪಿ.

1934.

ಕ್ರಯ: ರೂ. 1—0—0.

ಪ್ರತ್ಯಕ್ಷ ದೇವತೆಗಳಾದ
ಮಾತಾಪಿತೃಗಳ
ಅಡಿದಾವರೆಯಲ್ಲಿ
ಸಮರ್ಪಣೆ.

ಮುನ್ನುಡಿ

ಕಂ॥ ಗುರುವೇ ಸರಸಿಜಭವನುಂ।
ಗುರುವೇ ಸರಸಿರುಹನಾಭನೀಶನುಮದಜುಂ॥
ಗುರುಗಳ ಚರಣಂಗಳ್ಗಾ।
ನೆರಗಿದಪೆಂ ಭಕ್ತಿಯುಕ್ತನಾಗನವರತಂ॥

ಇದು ಭಾಸಮಹಾಕವಿಯಿಂದ ವಿರಚಿತವಾದ ಅಭಿಷೇಕ ನಾಟಕದ ಭಾಷಾಂತರವು. ರಾಮಾಯಣದ ಕಿಷ್ಕಿಂಧಾ–ಸುಂದರ–ಯುದ್ಧಕಾಂಡಗಳ ಕತೆಯನ್ನೊಳಗೊಂಡಿರುವುದು. ಈ ನಾಟಕದ ಆದಿಯಲ್ಲಿ ಸುಗ್ರೀವಾಭಿಷೇಕವೂ ಅಂತ್ಯದಲ್ಲಿ ರಾಮಾಭಿಷೇಕವೂ ನಡೆಯುವುದು. ನಾಟಕದ ಮಧ್ಯದಲ್ಲಿ ವಿಭೀಷಣನ ಲಂಕಾಧಿಪತ್ಯವು ಸೂಚಿತವಾಗಿರುವುದು. ರಾವಣ ಯುದ್ಧಾನಂತರದಲ್ಲಿ, ಸ್ವರ್ಗಸ್ಥನಾದ ದಶರಥನು ಲಂಕೆಗೆ ಬಂದು ಅಲ್ಲಿ ತಾನಾಗಿಯೆ ಶ್ರೀರಾಮಚಂದ್ರನಿಗೆ ಅಭಿಷೇಕಮಾಡಿದಂತೆ ಹೇಳಿದೆ. ಈ ಕಾರಣಗಳಿಂದ ಮಾತ್ರವೆ ಕವಿ ಇದಕ್ಕೆ 'ಅಭಿಷೇಕ' ನಾಟಕವೆಂದು ಹೆಸರಿಟ್ಟಂತೆ ತೋರುತ್ತದೆ. ವಾಲಿಯನ್ನು ಹೊಡೆದಿರುವ ವಿಷಯದಲ್ಲಿ ಶ್ರೀರಾಮಚಂದ್ರನ ಧರ್ಮಸೂಕ್ಷ್ಮತೆಯನ್ನೂ ಆ ಕಾಲದ ಪದ್ಧತಿಯನ್ನೂ ಕವಿ ಚೆನ್ನಾಗಿ ತೋರಿಸಿರುವನು. ಭಗವಂತನಾದರೂ ಮಾನವ ಜನ್ಮವನ್ನೆತ್ತಿದಾಗ ಮನುಷ್ಯವರ್ಗದ ನಡೆವಳಿಯನ್ನನುಸರಿಸುವುದರಿಂದಲೇ ಅವನಿಗೆ ಗೌರವವೂ ಲೋಕಕ್ಕೆ ಹಿತವೂ ಉಂಟಾಗಬೇಕು–ಎಂಬುದನ್ನು ಆರನೆಯಂಕದಲ್ಲಿ ಸ್ಪಷ್ಟಗೊಳಿಸಿರುವನು. ಈ ಕವಿಯ ಭಾವಗಳನ್ನು ಕಾಳಿದಾಸನೇ ಮುಂತಾಗಿ ಅನೇಕರು ತೆಗೆದುಕೊಂಡಿರುವುದರಿಂದ ಇವನ ಪ್ರಶಸ್ತಿಯು ವ್ಯಕ್ತವಾಗಿಯೆ ಇರುವುದು. ಸ್ವಪ್ನವಾಸವದತ್ತ, ಪ್ರತಿಮಾ, ಬಾಲಚರಿತ, ಪಂಚರಾತ್ರ, ಪ್ರತಿಜ್ಞಾಯೌಗಂಧರಾಯಣ, ದೂತಘಟೋತ್ಕಚ, ದೂತವಾಕ್ಯ, ಅವಿಮಾರಕ, ಊರುಭಂಗ, ಚಾರುದತ್ತ, ಮಧ್ಯಮವ್ಯಾಯೋಗ, ಕರ್ಣಭಾರ ಎಂಬೀ ರೂಪಕಗಳೂ ಏತತ್ಕೃತವೆಂದು

ಹೇಳುತ್ತಾರೆ. ಇವನು ಕ್ರಿ. ಪೂ. ಸು. ೭ನೆಯ ಶತಮಾನದಲ್ಲಿದ್ದನೆನ್ನುವರು. ಇವನ ಶೈಲಿಯು ಸುಲಭವಾಗಿಯೂ ಮನೋಹರವಾಗಿಯೂ ಇರುವುದು.

ಇದನ್ನು ಆದರಿಸಿ ತಮ್ಮ ಪತ್ರಿಕೆಯಲ್ಲಿ ಪ್ರಚಾರಪಡಿಸಿದ ಬೆಂಗಳೂರು ಕರ್ನಾಟಕ ಸಾಹಿತ್ಯಪರಿಷತ್ಪತ್ರಿಕಾಲಯದವರಿಗೂ, ಪುಸ್ತಕರೂಪವಾಗಿ ಅಚ್ಚುಮಾಡಿಸಿ ಪ್ರಕಟಿಸಲು ಕೈಗೊಂಡ ಉಡುಪಿ ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಮತ್ತು ಶ್ರೀಕೃಷ್ಣಮುದ್ರಣಾಲಯದ ಕರ್ತರಾದ ಮ. ರಾ. ರಾ. ಪಾವಂಜೆ ಗುರುರಾವ್ ಇವರಿಗೂ, ಶ್ರೀಕೃಷ್ಣಮುದ್ರಣಾಲಯದ ಮ್ಯಾನೇಜರಾದ ಶ್ರೀಯುತ ಬಿ. ರಾಮಕೃಷ್ಣಾಚಾರ್ಯ, ಬಿ. ಎ. ಅವರಿಗೂ ನನ್ನ ವಂದನೆಗಳು.

ಕಂ॥ ಇದಱೊಳ್ಇರೆ ದೋಷಂ ಸಂ।
ಮುದದಿಂ ತಿರ್ದುವುದು ಪಂಡಿತರ್ಕಳ್ ಮತ್ತಂ॥
ಪುದಿದಿರೆ ಗುಣಮಿನಿಸಾನುಂ।
ಪದೆಪಂ ತೋರ್ಪುದು ಸಮಂತು ಸೌಹೃದದಿಂದಂ॥

ಇತಿ ಸಜ್ಜನವಿಧೇಯ,

ಬಿ. ನಂಜುಂಡಸ್ವಾಮಿ.

ಪಾತ್ರವರ್ಗ.

ಪುರುಷರು:—		ಪ್ರವೇಶಿಸುವ ಅಂಕಗಳು.
1. ರಾಮ	ನಾಯಕ	1, 4, 6.
2. ಲಕ್ಷ್ಮಣ		1, 4, 6.
3. ಸುಗ್ರೀವ		1, 4, 6.
4. ಹನುಮಂತ		1, 2, 3, 4, 6.
5. ವಾಲಿ		1.
6. ಅಂಗದ		1.
7. ಕಕುಭ	ಸುಗ್ರೀವನ ಸೇವಕರು	2.
8. ಬಿಲಮುಖ		2.
9. ರಾವಣ		2, 3, 5, 6.
10. ಶಂಕುಕರ್ಣ	ಅಶೋಕವನಪಾಲಕ	3.
11. ರಾಕ್ಷಸ	ರಾವಣನ ಸೇವಕ	3, 5.
12. ವಿಭೀಷಣ		3, 4, 6.
13. ವಾನರ ಕಂಚುಕಿ		4.
14. ವಾನರ ಸೇನಾಪತಿ		4.
15. ವರುಣ	ದಿಕ್ಪಾಲಕ	4.
16. ನೀಲ		4.
17. ಶುಕ	ರಾವಣನ ಮಂತ್ರಿಗಳು	4.
18. ಸಾರಣ		4.
19. ರಾಕ್ಷಸ ಕಂಚುಕಿ		5.
20. ವಿದ್ಯುಜ್ಜಿಹ್ವ	ರಾವಣನ ಸೇವಕ	5.
21. ಮೂವರು ವಿದ್ಯಾಧರರು		6.
22. ಅಗ್ನಿ	ದಿಕ್ಪಾಲಕ	6.
23. ರಾಕ್ಷಸರು		3.
24. ವಾನರರು		4.

ಸ್ತ್ರೀಯರು:—		
1. ಸೀತೆ	ನಾಯಿಕೆ	2, 5, 6.
2. ತಾರೆ	ವಾಲಿಯ ಹೆಂಡತಿ	1.
3. ವಿಜಯೆ	ಪ್ರತೀಹಾರಿ	3.
4. ರಾಕ್ಷಸಸ್ತ್ರೀಯರು		2, 3, 5.



ಭಾಸ ಮಹಾಕವಿಯ

ಅಭಿಷೇಕ ನಾಟಕ

ಪ್ರಥಮಾಂಕ

ಶಾ॥ ಶ್ರೀ ಗೌರೀವದನಾರವಿಂದ ದಿನಪಂ ಮೌನೀಂದ್ರ ಸಂಸೇವಿತಂ।
ನಾಗೇಂದ್ರಾಭರಣಾಂಚಿತಂ ಶಶಿಧರಂ ಕೈಲಾಸ ವಾಸಂ ಭವಂ॥
ವಾಗೀಶಾದ್ಯಮರೌಘಸೇವಿತಪದಂ ಗಂಗಾ ಧರಂ ಶಂಕರಂ।
ರಾಗಂಬೆತ್ತಿಳೆಗೀವನಕ್ಕೆ ಸೊಗಮಂ ದ್ವಾರಾವತೀಶಂ ಶುಭಂ॥

[ನಾಂದ್ಯನಂತರದಲ್ಲಿ ಸೂತ್ರಧಾರನು ಪ್ರವೇಶಿಸಿ]

ಉ॥ ಗಾಧಿ ಕುಮಾರನಧ್ವರ ವಿಘಾತಿಗಳಂ ನೆರೆ ಪೊಯ್ದು ಮತ್ತಮಾ।
ಯೋಧನದೊಳ್ ವಿರಾಧ ಖರ ದೂಷಣರೆಲ್ಲರ ಶೌರ್ಯಮಂ ಕವ।
ರ್ದಾದಮಪಾರ ದರ್ಪಿತ ಕಬಂಧ ಕಪೀಂದ್ರರನಿಕ್ಕಿದಾತನಾ।
ಮೋದದೆ ನಿಮ್ಮನೋವುಗೆ ನಿಶಾಚರ ಪಾಲಕ ವಂಶ ನಾಶಕಂ ॥ ೧॥

ಆರ್ಯಮಿಶ್ರರನ್ನು ಕುರಿತು ಹೀಗೆ ವಿಜ್ಞಾಪಿಸುವೆನು:—(ಮುಂದೆ ಬಂದು ನೋಡಿ) ಏನಿದು? ನಾನು ವಿಜ್ಞಾಪಿಸುವಷ್ಟರಲ್ಲಿ ಯಾವುದೋ ಶಬ್ದವು ಕೇಳಿಬರುತ್ತಿರುವುದು. ಇರಲಿ! ನೋಡುವೆನು.

(ತೆರೆಯಲ್ಲಿ) ಇತ್ತಲಿತ್ತಲ್ ಸುಗ್ರೀವಾ!

ಪಾರಿಪಾರ್ಶ್ವಕ—(ಪ್ರವೇಶಿಸಿ) ಭಾವ!

ಕಂ॥ ಖರ ಮರುದುದ್ಧತದಿಂ ಭೀ।
ಕರದಿಂ ಗಮಿಸುತ್ತೆ ಗಗನದೊಳ್ ಗರ್ಜಿಸುವಾ।
ಶರದ ರವದಂತೆ ಕರ್ಣ ಕು।
ಹರಮಂ ಸೀಳ್ವೀ ಮಹಾ ರವಮುದೆಲ್ಲಿಯದೈ ॥ ೩ ॥

ಸೂತ್ರಧಾರ—ಮಾರಿಷ! ಕೇಳಲಿಲ್ಲವೇನು? ಇದಾದರೋ ಸೀತಾಪಹರಣದಿಂದ ಸಂತಪ್ತನೂ ರಘುಕುಲಪ್ರದೀಪನೂ ಸಮಸ್ತ ಲೋಕ ನಯನಾಭಿರಾಮನೂ ಆದ ರಾಮನಿಗೂ, ದಾರಾಭಿಮರ್ಶನದಿಂದ ತಿರಸ್ಕೃತನೂ ಸಮಸ್ತ ಕಪಿ ಸೈನ್ಯಾಧಿಪನೂ ವಿಪುಲ ಮಹಾಗ್ರೀವನೂ ಆದ ಸುಗ್ರೀವನಿಗೂ, ಪರಸ್ಪರ ಉಪಕಾರ ಮಾಡುವಂತೆ ಪ್ರತಿಜ್ಞೆಯಾಗಿ, ಸಮಸ್ತ ವಾನರಾಧಿಪತಿಯೂ ಹೇಮಮಾಲಿಯೂ ಆದ ವಾಲಿಯನ್ನು ಕೊಲ್ಲಲು ಸನ್ನಾಹ ನಡೆಯುತ್ತಿರುವುದು. ಇವರಾದರೊ—

ಕಂ॥ ಧರೆಯಿಂ ದೂಡಿದ ಸುಗ್ರೀ।
ವರಸಾಧಿಪನಂ ಮಗುಳ್ದು ಮಿಳೆಯೊಳ್ ನಿಲಿಸಲ್ ॥
ಸುರ ಪತಿಯಂ ನೆಲೆಗೊಳಿಸಲ್।
ಹರಿ ಹರರೆನೆ ಬಂದ ರಾಮ ಲಕ್ಷ್ಮಣರಲ್ತೇ ॥ ೪ ॥

[ಇದು ಸ್ಥಾಪನೆ]

[ಆಮೇಲೆ ರಾಮ ಲಕ್ಷ್ಮಣ ಸುಗ್ರೀವ ಹನುಮಂತರು ಪ್ರವೇಶಿಸುವರು]

ರಾಮ — ಇತ್ತಲಿತ್ತಲ್ ಸುಗ್ರೀವಾ!

ಉ॥ ಎನ್ನಯ ಬಾಣ ಪಾತ ಹತಿಯಿಂ ತವೆ ಸೀಳ್ದ ವಿಕೀರ್ಣ ದೇಹಿಯಂ।
ನಿನ್ನಯ ವೈರಿಯಂ ಬುವಿಯೊಳೀಗಳೆ ಬೀಳಿಸುವೆಂ ಚಣಕ್ಕನಾ ॥

ನಿನ್ನೊಳೆ ರಾಜನೇ ಭಯಮನೆನ್ನಯ ಪಾರ್ಶ್ವದೊಳಿರ್ಪೆಯಲ್ತೆ ನೀಂ ।
ಮುನ್ನಮೆ ನೋಡಿದಂತೆ ತಿಳಿ ಯಿಾ ರಣದೊಳ್ ಹತನಾದ ವಾಲಿಯಂ॥ ೪ ॥

ಸುಗ್ರೀವ—ದೇವಾ! ನಾನಾದರೊ ಪೂಜ್ಯನ ಪ್ರಸಾದದಿಂದ ದೇವ ರಾಜ್ಯವನ್ನಾದರೂ ಸಂಪಾದಿಸಬಲ್ಲೆನು. ಹೀಗಿರುವಲ್ಲಿ ಈ ವಾನರ ರಾಜ್ಯವು ಯಾವ ವಿಷಯವು? ಏಕೆಂದರೆ—

ಚಂ॥ ಹಿಮಗಿರಿ ಕೂಟದಂತೆ ಬನದೊಳ್ ಬಳೆದೊಪ್ಪಿದ ಸಪ್ತಸಾಲಮಂ ।
ಗಮಿಸಿಯತೀವ ವೇಗದೆ ಧರಿತ್ರಿಯನೊಂದಿ ಬಳಿಕ್ಕೆ ಭೋಗಿ ಲೋ ॥
ಕಮನುರೆ ಸೇರ್ದ್ದಮಂಬುಧಿಯೊಳಳ್ದಿ ಮರಳ್ದುದು ನಿನ್ನ ಬಾಣ ಮು ।
ಸ್ತ್ರಮಿಸಿತು ಸಂಶಯಂ ಗಡಿರಿವಯ್ ಗಡ ವಾಲಿಯುರಸ್ಸನಿಂದು ನೀಂ ॥ ೫ ॥

ಹನೂಮಾನ್—ರಾಜನೇ!

ಕಂ॥ ಪರಿದುದು ಭೀತಿ ಭವನ್ಮುಖ ।
ವರವಚನದಿನೆಮಗೆ ದುಃಖಮುಂ ಗಡ ಪೋಯ್ತಯ್ ॥
ಹರಿಗೆ ಜಯಂಗುಡೆ ರಘುವರ ।
ತೆರಳಾ ಕರ್ಮ್ಮಗಿಲಿನಂದದಾ ಗಿರಿ ವರಮಂ ॥ ೬ ॥

ಲಕ್ಷ್ಮಣ—ಆರ್ಯನೆ! ವೃಕ್ಷಗಳಿಂದ ದಟ್ಟವಾಗಿ ಶೋಭಿಸುತ್ತಿರುವ ಈ ವನಾಂತದ ಸಮಿಾಪದಲ್ಲಿಯೇ ಕಿಷ್ಕಿಂಧೆಯಿರಬೇಕು.

ಸುಗ್ರೀವ--ಕುಮಾರನು ಚೆನ್ನಾಗಿ ಹೇಳಿದನು.

ಕಂ॥ ನೃಪ ವರ ಭುಜ ರಕ್ಷಿತರಾಂ ।
ಕಪಿ ವರ ಭುಜ ರಕ್ಷ್ಯಮಾದ ಕಿಷ್ಕಿಂಧೆಗೆ ಬಂ ॥
ದಪೆವಯ್ ನೀನಿಲ್ಲಿರ ಕಂ ।
ಪಿಪೆ ನಾನಾರ್ಭಟಿಸಿ ಭೂಮಿ ಭೂಭೃತ್ತುಗಳಂ ॥ ೭ ॥

ರಾಮ—ಆಗಲಿ, ನಡೆ.

ಸುಗ್ರೀವ—ಸ್ವಾಮಿಯಾಜ್ಞೆ (ಎಂದು ಹೋಗಿ)

ಕಂ॥ ಅಪರಾಧಂಗೆಯ್ಯದೊಡಂ ।
ಕಪಿಪನೆ ವರ್ಜಿಸಿದಯಲ್ತೆಯಾ ಸುಗ್ರೀವಂ ॥

ಸುಪಥಂ ಸಂಗ್ರಾಮದೊಳ್ ।
ಚ್ಛಿಪನೀಗಳ್ ನಿನ್ನ ಪಾದ ಸೇವೆಯನೆಸಗಲ್ ॥ ೮ ॥

(ತೆರೆಯಲ್ಲಿ) ಹೇಗೆ? ಹೇಗೆ? ಸುಗ್ರೀವನೆಂತಲೊ?

[ಅನಂತರ ಸೆರಗನ್ನು ಹಿಡಿದು ತಡೆವ ತಾರೆಯೊಡನೆ ವಾಲಿಯು ಪ್ರವೇಶಿಸುವನು]

ವಾಲಿ—ಹೇಗೆ? ಹೇಗೆ? ಸುಗ್ರೀವನೆಂತಲೊ?

ಕಂ॥ ಬಿಡುಯೆನ್ನರಿವೆಯನೇತಕೆ ।
ಪಿಡಿವೌ ಭಯ ವಿಹ್ವಲಾಕ್ಷಿ ನೀರೇ ತಾರೇ ॥
ಕೆಡೆವುತೆ ರಣದೊಳ್ ಕೆನ್ನೀ ।
ರ್ವಡೆದೊಡಲನನೀಕ್ಷಿಸುವುದು ಸುಗ್ರೀವನನಿಂ ॥ ೯ ॥

ತಾರೆ—ಮಹಾರಾಜನೇ! ಪ್ರಸನ್ನನಾಗು, ಪ್ರಸನ್ನನಾಗು. ಸುಗ್ರೀವನು ಸ್ವಲ್ಪ ಕಾರಣದಿಂದ ಬಂದಿರಲಾರನು. ಆದುದರಿಂದ ಅಮಾತ್ಯ ವರ್ಗದೊಡನೆ ಆಲೋಚಿಸಿ ತೆರಳಬಹುದು.

ವಾಲಿ—ಆಃ!

ಚಂ॥ ವಿಧುಮುಖಿ! ಎನ್ನ ವೈರಿಗೆ ಸಹಾಯಮನಾಗಿಪನಿಂದ್ರನಾದೊಡಂ ।
ಪಡೆದು ಖರಾಗ್ರಮಂ ಪರಶುವಂ ಪಿಡಿದಂ ಪರಮೇಶನಾದೊಡಂ ॥
ಬಿದಿಯ ಪಿತಂ ಸಿತಾಂಬುರುಹಲೋಚನನಾ ಹರಿಯಾದೊಡಂ ಸಮಂ ।
ತಿದುರಿಸಿ ನಿಲ್ಲುತೆನ್ನನಿರಿಯಲ್ಕೆ ವಿಶೇಷಮಶಕ್ತರಪ್ಪರೌ ॥ ೧೦ ॥

ತಾರೆ—ಮಹಾರಾಜನೇ! ಪ್ರಸನ್ನನಾಗು, ಸೈರಣೆಯನ್ನು ತಾಳು. ಈ ಜನದ ವಿಷಯದಲ್ಲಿ ಅನುಗ್ರಹವಿಟ್ಟು ಕಾಪಾಡು.

ವಾಲಿ—ತಾರೇ! ನನ್ನ ಪರಾಕ್ರಮವನ್ನಾದರೂ ಕೇಳು.

ಕಂ॥ ಅಮರ್ದಂ ಕಡೆವಾಗಳ್ ನಾಂ ।
ಗಮಿಸಿ ಸುರಾಸುರರನೇಡಿಸುತೆ ಫಣಿಪತಿಯಂ ॥
ಭ್ರಮಿತಾಕ್ಷನನುಗ್ರಾಂಗನ ।
ನಮಿತಂ ಸೆಳೆಯಲ್ಕೆ ಕಂಡು ಬೆಕ್ಕಸವಾಂತರ್ ॥ ೧೧ ॥

ತಾರೆ—ಮಹಾರಾಜನು ಪ್ರಸನ್ನನಾಗಬೇಕು, ಸೈರಿಸಿಕೊಳ್ಳಬೇಕು.

ವಾಲಿ—ಆಃ! ನನ್ನ ಅಧೀನಳಾಗಿರು, ಒಳಕ್ಕೆ ಹೋಗು.

ತಾರೆ—ಇದೊ! ಮಂದಭಾಗಿನಿಯು ತೆರಳುವೆನು(ಎಂದು ಹೋಗುವಳು.)

ವಾಲಿ—ಆಃ! ತಾರೆಯು ತೆರಳಿದಳು. ಇನ್ನು ನಾನು ಸುಗ್ರೀವನನ್ನು ಭಗ್ನಗ್ರೀವನನ್ನಾಗಿ ಮಾಡುವೆನು. (ಬೇಗನೆ ಬಂದು) ಸುಗ್ರೀವಾ! ನಿಲ್ಲು, ನಿಲ್ಲು—

ಕಂ॥ ಸುರ ನಾಥಂ ಶರ ಣಕ್ಕೆಮ।
ಇರದಿರೆ ವಿಭು ಹರಿಯೆ ನಿನಗೆ ಕಾಪಿರ್ಕೆನ್ನೀ॥
ವರ ಲೋಚನ ಪಥದೊಳ್ ಗೋ।
ಚರಿಸಿ ಬಳಿಕ್ಕಸಿರಿನೊಡನೆ ಪೋಗೆ ಗಡಾ ನೀಂ ॥ ೧೨ ॥

ಇತ್ತಲಿತ್ತಲ್

ಸುಗ್ರೀವ—ಮಹಾರಾಜನಾಜ್ಞೆ. (ಇರ್ವರೂ ಬಾಹುಯುದ್ಧವನ್ನು ಮಾಡುವರು.)

ರಾಮ—ಇವನೀ ವಾಲಿಯು—

ಮ॥ ಸ್ರ॥ ತವೆ ಕರ್ಚಿಪೌ್ಡಿನಿಂ ಭೀಕರ ಕರಮರುಣಾಕ್ಷಿಪ್ತ ನೇತ್ರಂಗಳಿಂದು।
ರ್ಕುವ ಬಲ್ಪಿಂದಾಂತ ಕೈ ಮುಟ್ಟಿಯಿನುರೆ ಮೆರೆಯುತ್ತಿರ್ಪ ದಂಷ್ಟ್ರಂಗಳಿಂ ಕಿ॥
ಚ್ಚುವ ಭೀತ್ಯುತ್ಪನ್ನ ನಾದಂಗಳಿನಿದೆಕೊ ಕಪೀಂದ್ರಂ ಗಡಾ ರಾಜಿಪಂ ಪ್ರಾ।
ಹವದೊಳ್ ನೈಜಂ ಸುಡಲ್ಕಿಚ್ಛಿಸಿದ ಪರಮ ಕಾಲಾಗ್ನಿಯೆಂಬಂದದಿಂದಂ ॥ ೧೩ ॥

ಲಕ್ಷ್ಮಣ—ಆರ್ಯನು ಇಗೋ ಸುಗ್ರೀವನನ್ನು ನೋಡುವನಾಗಲಿ—

ಮ॥ ಅರಳಂಭೋರುಹದಂತೆ ಚೆಂಬೊಗರಿನಿಂದೊಪ್ಪಿರ್ಪ ನೇತ್ರಂಗಳಿಂ।
ವರ ಹೇಮಾಂಗದಮಂ ಸುಕಾಂತಿಯುತಮಂ ಕಟ್ಟಿರ್ಪ ಪೆರ್ದೋಳ್ಗಳಿಂ॥
ಹರಿ ಭಾವಂಬಿಡಿದುಂ ಸುವೃತ್ತಿಯುಳಿದುಂ ತನ್ನಗ್ರಜಂ ವಾನರೇ।
ಶ್ವರನಂ ಕೀಳ್ಗಳೆದಾಂತು ಮಾರ್ಮಲೆವುತುಂ ತೋರ್ದಪ್ಪನೀಗಳ್ ಗಡಾ ॥ ೧೪ ॥

ಅಯ್ಯೋ! ವಾಲಿಯಿಂದ ಹೊಡೆಯಿಸಿಕೊಂಡ ಸುಗ್ರೀವನು ಬಿದ್ದನು.

ಹನೂಮಾನ್—ಹಾ! ಹಾ! (ಕಾತರದಿಂದ ರಾಮನ ಬಳಿಗೆ ಬಂದು) ಸ್ವಾಮಿಗೆ ಜಯವಾಗಲಿ! ಈತನ ಅವಸ್ಥೆಯು ಈ ರೀತಿಯಾಗಿದೆ—

ಕಂ॥ ಅತಿ ಬಲನೀ ಕಪಿ ಪತಿ ಮೇ ।
ಣತಿ ದುರ್ಬಲನೆನ್ನ ವಿಭು ಗಡಾ ಇನ್ನಿವನಾ ॥
ಸ್ಥಿತಿಯುಂ ಶಪಥಮುಮಂ ಸುವಿ ।
ಹಿತ ಮತಿಯಿಂದಾರ್ಯನೇ ವಿಚಾರಿಸವೇಳ್ಕುಂ ॥ ೧೫ ॥

ರಾಮ—ಹನೂಮಾನ್! ಸಾಕು, ಸಾಕು, ಕಳವಳಿಸದಿರು. ಇದನ್ನೇ ಮಾಡುತ್ತಿರುವೆನು. (ಎಂದು ಬಾಣವನ್ನು ಬಿಟ್ಟು) ಭಲಾ! ವಾಲಿಯು ಬಿದ್ದನು.

ಲಕ್ಷ್ಮಣ—ಇವನೀ ವಾಲಿಯು—

ಮ॥ ರುಧಿರಂಜಿತ್ತ ಘನಾಘನಂ ಜಗುಳ್ದ ಸಂರಕ್ತೇಕ್ಷಣಂ ಮತ್ತಮೊಂ ।
ಡಿದ ಕಾಠಿಣ್ಯ ವಿಶಾಲ ಬಾಹು ಯಮ ಲೋಕಾಪೇಕ್ಷಿಯಿಾತಂ ತುಡುಂ ॥
ಕಿದ ಬಾಣಾಹತಿಯಿಂದೆ ಬಲ್ಮೆಯಿನತೀವಂ ತಳ್ಗಿದಾ ಗಾತ್ರಮುಂ ।
ಪವನೆಂತೋ ಗಡ ಧೈರ್ಯದಿಂದಮೊಳೆದತ್ಯುತ್ಕಷ್ಟದಿಂದೆಳ್ದಪಂ ॥ ೧೬ ॥

ವಾಲಿ—(ಮೂರ್ಛೆಗೊಂಡು ಮರಳಿ ತಿಳಿದು ಅಂಬಿನಲ್ಲಿದ್ದ ನಾಮಾಕ್ಷರಗಳನ್ನು ಓದಿ ರಾಮನನ್ನು ಕುರಿತು)—

ಚಂ॥ ಇಳೆಯಧಿನಾಥ ಧರ್ಮಗಳನಾಂತು ಧರೋದಿತ ಧರ್ಮ ಸಂಶಯಂ ।
ಗಳಿಸುರೆ ಮುಕ್ತನಾಗಿ ಜನದೊಳ್ ಕಪಟಾಚರಣಂಗಳಂ ಕರಂ ॥
ಕಳೆಯಿಪುದರ್ಕೆ ವಾಂಛಿಪನೆನುತ್ತೆ ವಿರಾಜಿಪ ವೀರ ರಾಮ ನೀಂ ।
ಕೊಳುಗುಳದೊಳ್ ಕ್ರಮಂಗಳೆದು ವಂಚನೆಗೊಳ್ವುದದಾವ ನೀತಿಯೈ ॥ ೧೭ ॥

ಅಯ್ಯೋ!

ಕಂ॥ ಸಲೆ ಸೌಮ್ಯಾಕೃತಿಯಿಂ ಮೇಣ್ ।
ವಿಲಸದ್ಯಶದಿಂದೆ ರಂಜಿಸುವ ನೀನೆನ್ನಂ ॥
ಛಲದಿಂ ಪ್ರಹರಿಸಿ ಭೂಮಿಾ ।
ತಳದೊಳ್ ಮುಷ್ಕೀರ್ತಿಯಂ ಪ್ರರೂಢಿಸಿದೆಯಲೇ ॥ ೧೮ ॥

ಎಲೈ ರಾಘವ! ನಾರು ಮುಡಿಯನ್ನು ಧರಿಸಿದವನಾದ, ವೇಷದಿಂದ ಬದಲಾಯಿಸಿದ ಮನಸ್ಸುಳ್ಳವನಾದ ನೀನು, ನನ್ನ ತಮ್ಮನೊಡನೆ ಕಾಳೆಗ ವಲ್ಲಿ ಕಾತರನಾಗಿದ್ದ ನನ್ನನ್ನು ಮರೆಯಿಂದ ಕೊಲ್ಲುವುದು ಅಧರ್ಮವಲ್ಲವೆ?

ರಾಮ—ಹೇಗೆ? ಮರೆಯಿಂದ ಕೊಲ್ಲುವುದನ್ನು ಅಧರ್ಮವೆನ್ನುವೆಯಾ?

ವಾಲಿ—ಸಂಶಯವೇನು?

ರಾಮ—ಹಾಗಲ್ಲ; ನೋಡು—

ಕಂ॥ ಬಲೆಯುಂ ಸೇರಿದ ಮೃಗ ಸಂ।
ಕುಲಮುಂ ಸಂಹರಿಪುದುಚಿತಮಾದಪುದಲ್ತೇ ।
ಕೊಲೆಗಾಂತಂ ಮೃಗಿಯುಂ ನೀ ।
ನಲೆಯುದರಿಂ ಗುಪ್ತರೀತಿಯಿಂ ಶಿಕ್ಷಿಸಿದೆಂ ॥ ೧೯ ॥

ವಾಲಿ—ನೀನು ನನ್ನನ್ನು ದಂಡ್ಯನೆಂದು ತಿಳಿದಿರುವೆಯಾ?

ರಾಮ—ಸಂಶಯವೇನು?

ವಾಲಿ—ಯಾವ ಕಾರಣದಿಂದ?

ರಾಮ—ಅಗಮ್ಯಾಗಮನದಿಂದ.

ವಾಲಿ—ಅಗಮ್ಯಾಗಮನದಿಂದಲೇ? ನಮಗಿದು ಧರ್ಮವಾದುದು.

ರಾಮ—ಅಯ್ಯಾ! ಯುಕ್ತವಾದುದು!—

ಕಂ॥ ನೆರೆ ಧರ್ಮಾಧರ್ಮಂಗಳ ।
ನರಿತುಂ ಕಪಿ ಸಾರ್ವಭೌಮನಾಗಿರುತುಂ ನೀಂ ।
ಸರಿಗೆತ್ತು ಮಿಗಕೆ ನಿನ್ನಂ ।
ಸರಿಯೇಂ ಸೋದರನ ಸತಿಯುನೊಂದುವ ಕಜ್ಜಂ ॥ ೨೦ ॥

ವಾಲಿ—ಸೋದರನ ಸತಿಯನ್ನು ಸೋಂಕಿದುದರಲ್ಲಿ ಸಮಾನ ದೋಷಿಗಳಾದೆವಿಬ್ಬರ್ರಲ್ಲಿ ನಾನು ಮಾತ್ರ ಶಿಕ್ಷಾರ್ಹನು, ಸುಗ್ರೀವನಲ್ಲ! -

ರಾಮ—ಶಿಕ್ಷಾರ್ಹನು ನೀನು; ಅದರಿಂದ ಶಿಕ್ಷಿತನಾದೆ. ಶಿಕ್ಷೆಗೆ ತಗದವರನ್ನು ಶಿಕ್ಷಿಸುವುದೇ ಇಲ್ಲ.

ವಾಲಿ—

ಕಂ॥ ಗುರುವಾದೆನ್ನಿನಿಯಳನೊಡ ।
ವೆರೆದಂ ಸುಗ್ರೀವನದರಿನಾನಾತನೆಯಾ ॥
ತರುಣಿಯೊಳೊಡಗೂಡಿದೆನಿಂ ।
ತಿರಲಾನೊರ್ವನೆಯೆ ದಂಡ್ಯನೆಂತೈ ರಾಮಾ ॥ ೩೧ ॥

ರಾಮ—ಹಿರಿಯವನು ಕಿರಿಯವನ ಮಡದಿಯನ್ನು ತಾಗುವುದು ಯಾವಾಗಲೂ ಇಲ್ಲವಲ್ಲವೆ?

ವಾಲಿ—ಅಯ್ಯೋ! ಇನ್ನು ನನ್ನ ಬಾಯಿ ಮುಚ್ಚಿತು. ನಿನ್ನಿಂದ ದಂಡಿತನಾದೆನಾದುದರಿಂದ ನನ್ನ ಪಾಪವು ಹೋಯಿತಲ್ಲವೆ?

ರಾಮ—ಹಾಗೆಯೇ ಸರಿ.

ಸುಗ್ರೀವ—ಅಯ್ಯೋ! ಅಯ್ಯೋ!

ಚಂ॥ ಹರಿ ವರ ಸಾಮಜೇಂದ್ರಗಮನಾ ಗಜ ಹಸ್ತಕೆ ಸಾಟಿಯಾಗಿ ಮ ।
ತ್ತರಿ ಶರದಿಂದೆ ಸೀಳ್ದು ಭುಜ ಕೀರ್ತಿಯಿನೊಂದಿದ ನಿನ್ನ ಬಾಹುಗಳ್ ॥
ಧರಣಿಯ ಮೇಲೆ ಬಿಳ್ದಿರಲಿದಂ ನೆರೆ ನಿಟ್ಟಿಸಿಯೆನ್ನ ಮಾನಸಂ ।
ಗರೆದು ಕುಸುಳ್ದು ಬಿಳ್ದುಮುರುಳ್ವಂತೆವೊಲಿರ್ದಪುದೀಗಳಕ್ಕಟಾ ॥ ೩೨ ॥

ವಾಲಿ–ಸುಗ್ರೀವ! ಸಾಕು ಅಳಲದಿರು. ಲೋಕ ಧರ್ಮವೇ ಹೀಗಿರುವುದು.

(ತೆರೆಯುಳ್ಳಿ) ಹಾ! ಹಾ! ಮಹಾರಾಜನು—

ವಾಲಿ—ಸುಗ್ರೀವ! ಸ್ತ್ರೀಜನವನ್ನು ತಡೆ, ತಡೆ; ಈ ರೀತಿಯಿಂದಿರುವ ನನ್ನನ್ನು ನೋಡಬಾರದು.

ಸುಗ್ರೀವ—ಮಹಾರಾಜನಾಜ್ಞೆ. ಹನೂಮಾನ್! ಹೀಗೆ ಮಾಡು.

ಹನೂಮಾನ್--ಕುಮಾರನಾಜ್ಞೆ (ಎಂದು ತೆರಳುವನು).

[ಬಳಿಕ ಅಂಗದನೂ ಹನುಮಂತನೂ ಪ್ರವೇಶಿಸುವರು.]

ಹನೂಮಾನ್—ಇತ್ತಲಿತ್ತಲ್ ಅಂಗದಾ!

ಅಂಗದ—

ಕಂ॥ ವಾನರ ಋಕ್ಷಾಧಿಪನವ ।
ಸಾನದ ಸಂಗತಿಯನರಿತು ಸಂತಾಪ ವಿಶೇ ॥
ಷೌನ್ನತ್ಯದೆ ಶಿಥಿಲಕ್ರಮು ।
ಜಾನುಗಳಂ ತಾಳ್ದನೆಂತೊ ನಡೆದಪೆನೀಗಳ್ ॥ ೨೩ ॥

ಹನೂಮಾನ್! ಮಹಾರಾಜನೆಲ್ಲಿ?

ಹನೂಮಾನ್—

ಕಂ॥ ಸ್ಕಂಧ ಮಹಾ ಶಕ್ತ್ಯಾಯುಧ ।
ದಿಂದೆ ಸಮಾಕ್ರಾಂತಮಾದ ಕ್ರೌಂಚಾಚಲದಾ ॥
ಅಂದದೆ ಕಣೆಯಿಂ ಸೀಳ್ದಿರ್ದೆ ।
ಯುಂ ಧರಣೀತಲದೊಳಿದೆಕೊ ರಾಜಿಸುತಿರ್ಪಂ ॥ ೨೪ ॥

ಅಂಗದ—(ಹತ್ತಿರ ಹೋಗಿ) ಹಾ! ಮಹಾರಾಜನೇ!

ಚಂ॥ ಅತಿಬಲ ವಾನರೇಂದ್ರ ಮೊದಲೊಳ್ ಸುಖ ಶಯ್ಯೆಯೊಳೊಪ್ಪುತಿರ್ದ ನೀಂ।
ಕ್ಷಿತಿ ತಲದಲ್ಲಿರುಳ್ದು ವಿಗತಾಂಗ ವಿಕಾರದಿನಿರ್ಪೆಯಲ್ತೆಯಿ ॥
ನ್ನತಿ ನಿಶಿತಾಗ್ರ ಬಾಣ ಹತಿಯಿಂ ಬಿರಿದೀ ತನುವಂ ಬಿಸುಟ್ಟು ಶಾ ।
ಶ್ವತ ಸುಖಮಿಾವ ವೀರ ಸುರ ಲೋಕಮನೇಂ ತೆರಳಲ್ಕೆಯಾಸಿಪಾ ॥ ೨೫ ॥

(ಎಂದು ಕೆಳಗೆ ಬೀಳುವನು.)

ವಾಲಿ—ಅಂಗದಾ! ಸಾಕು, ಶೋಕಿಸದಿರು. ಎಲೈ! ಸುಗ್ರೀವಾ—

ಕಂ॥ ಎನ್ನಪಕೃತಿಯಂ ಮರೆತು ಮ।
ಹೋನ್ನತ ಮತಿವಂತನೆನಿಸಿ ಕಪಿ ಪತಿಯಾಗು॥
ತ್ತಿನ್ನುಳಿದು ರೋಷಮಂ ಧ।
ರ್ಮಾನ್ವಿತನಾಗೆನ್ನ ಬಳಿಯ ಮೊಳೆಯಂ ಬಳೆಸಾ ॥ ೩೬ ॥

ಸುಗ್ರೀವ—ಮಹಾರಾಜನಾಜ್ಞೆ.

ವಾಲಿ—ಎಲೈ ರಾಘವಾ! ಯಾವ ಅಪರಾಧವನ್ನು ಮಾಡಿದರೂ ಕಪಿಗಳಾದ ಇವರಿರ್ವರ ಚಪಲತೆಯನ್ನು ನೀನು ಕ್ಷಮಿಸುವೆಯಲ್ಲವೆ?

ರಾಮ—ನಿಶ್ಚಯ; ಆಗಲಿ.

ವಾಲಿ—ಸುಗ್ರೀವಾ! ನಮ್ಮ ಕುಲಧನವಾದ ಈ ಹೇಮಮಾಲೆಯನ್ನು ಪತಿಕರಿಸು.

ಸುಗ್ರೀವ—ಅನುಗೃಹೀತನಾದೆನು (ಎಂದು ತೆಗೆದುಕೊಳ್ಳುವನು.)

ವಾಲಿ—ಹನೂಮಾನ್! ನೀರನ್ನು ತರುವವನಾಗು.

ಹನೂಮಾನ್—ಮಹಾರಾಜನಾಜ್ಞೆ. (ಎಂದು ಹೋಗಿ ಬಂದು,) ಇದೋ ನೀರು!

ವಾಲಿ—(ಆಚಮನ ಮಾಡಿ) ಪ್ರಾಣಗಳು ನನ್ನನ್ನು ಬಿಟ್ಟುಹೋಗುವಂತಿವೆ. ಇದೋ! ಗಂಗೆಯೇ ಮೊದಲಾದ ಮಹಾ ನದಿಗಳೂ, ಊರ್ವಶಿಯೇ ಮೊದಲಾದ ಅಪ್ಸರ ಸ್ತ್ರೀಯರೂ ನನ್ನನ್ನು ಸೇರಿರುವರು. ಇದೋ! ಸಾವಿರ ಹಂಸಗಳಿಂದ ಕೂಡಿದ, ವೀರರನ್ನು ಕರೆದೊಯ್ಯುವ ವಿಮಾನವು ನನಗಾಗಿ ಕಾಲನನುಮತಿಯಿಂದ ಬಂದಿದೆ. ಆಗಲಿ, ಬರುವೆನು, ಬರುವೆನು. (ಸ್ವರ್ಗಕ್ಕೆ ತೆರಳುವನು.)

ಎಲ್ಲರೂ—ಹಾ! ಹಾ! ಮಹಾರಾಜನು—

ರಾಮ—ಅಹೋ! ವಾಲಿಯು ಸ್ವರ್ಗವನ್ನಡರಿದನು. ಸುಗ್ರೀವಾ! ಇವನಿಗೆ ಸಂಸ್ಕಾರವನ್ನು ಮಾಡು.

ಸುಗ್ರೀವ— ದೇವನಾಜ್ಞೆ.

ರಾಮ—ಲಕ್ಷ್ಮಣಾ! ಸುಗ್ರೀವಾಭಿಷೇಕಕ್ಕೆ ಸಿದ್ಧಮಾಡು.

ಲಕ್ಷ್ಮಣ—ಆರ್ಯನಾಜ್ಞೆ. (ಎಲ್ಲರೂ ತೆರಳುವರು.)

ದ್ವಿತೀಯಾಂಕ

[ಅನಂತರದಲ್ಲಿ ಕಕುಭನು ಪ್ರವೇಶಿಸುವನು]

ಕಕುಭ—ಮಾಡತಕ್ಕ ಕೆಲಸಗಳು ಪ್ರಾಯಿಕವಾಗಿ ಮುಗಿದುದರಿಂದ ಸಕಲ ವಾನರಸೇನಾನಾಯಕರೂ ಆಹಾರಕಾರ್ಯದಲ್ಲಿ ಮಗ್ನರಾಗಿರುವರು. ಆದಕಾರಣ ನಾನೂ ಸ್ವಲ್ಪ ಆಹಾರವನ್ನು ತೆಗೆದುಕೊಳ್ಳುವೆನು. (ಹಾಗೆಯೇ ಮಾಡುವನು.)

ಬಿಲಮುಖ—(ಪ್ರವೇಶಿಸಿ) ಮಹಾರಾಜನಾದ ಸುಗ್ರೀವನು ಹೀಗೆ ಅಪ್ಪಣೆಮಾಡಿರುವನು: 'ಪೂಜ್ಯನಾದ ರಾಮನ ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡುವ ನಿಮಿತ್ತವಾಗಿ ಎಲ್ಲ ದಿಕ್ಕುಗಳಲ್ಲಿಯೂ ಸೀತೆಯನ್ನು ಹುಡುಕಲು ಅಪ್ಪಣೆಕೊಡಿಸಿದ್ದ ವಾನರರೆಲ್ಲರೂ ಹಿಂದಿರುಗಿದರು. ಅವರಲ್ಲಿ ದಕ್ಷಿಣ ದಿಕ್ಕಿಗೆ ಹೋದ ಕುಮಾರ ಅಂಗದನ ವಿಷಯವನ್ನು ತಿಳಿದು ಶೀಘ್ರವಾಗಿ ಬರುವವನಾಗು' ಎಂದು. ಆದರೆ ಕುಮಾರನು ಎಲ್ಲಿ ಹೋಗಿರಬಹುದು? (ಮುಂದೆ ಹೋಗಿ ನೋಡಿ) ಓಹೋ! ಇವನು ಆರ್ಯ ಕಕುಭನು; ಈತನನ್ನು ಕೇಳಿ ತಿಳಿಯುವೆನು. (ಹತ್ತಿರಕ್ಕೆ ಹೋಗಿ) ಆರ್ಯನು ಕ್ಷೇಮವೆ?

ಕಕುಭ—ಓಹೋ! ಬಿಲಮುಖ! ನೀನೆಲ್ಲಿಂದ?

ಬಿಲಮುಖ—ಆರ್ಯನೆ! ಮಹಾರಾಜನಾಜ್ಞೆಯಿಂದ ಕುಮಾರನಾದ ಅಂಗದನನ್ನು ನೋಡಲು ಬಂದಿರುವೆನು.

ಕಕುಭ—ಪೂಜ್ಯನಾದ ರಾಮನೂ ಮಹಾರಾಜನೂ ಕುಶಲರಷ್ಟೆ?

ಬಿಲಮುಖ—ಅಹುದು.

ಕಕುಭ—ಮಹಾರಾಜನ ಅಭಿಪ್ರಾಯವೇನು?

ಬಿಲಮುಖ—ಮಹಾರಾಜನಾದ ಸುಗ್ರೀವನು ಹೀಗೆ ಅಪ್ಪಣೆ ಮಾಡಿರುವನು— (ಎಂದು ಮೊದಲಿನಂತೆಯೇ ಹೇಳುವನು.)

ಕಕುಭ—ಸರಿ! ಅರ್ಧ ಕಾರ್ಯವಾಯಿತೆಂದರ್ಥವಾಯಿತೆಯಾ?

ಬಿಲಮುಖ—ಏನು? ಏನು?

ಕಕುಭ—ಕೇಳು.

ಚಂ॥ ಖಗ ಪತಿಯಿಂದೆ ಕೇಳ್ದು ರಘುನಾಥನ ಪತ್ನಿಯ ವೃತ್ತಮೆಲ್ಲಮಂ ।
ನಗ ವರಮಂ ಗಜೇಂದ್ರಯುತಮಂ ಸುಮಹೇಂದ್ರಮನಾಂತು ಕಾಯದ॥
ಲ್ಲುಗುವ ವಿಶೇಷ ವೀರ್ಯಭರದಿಂದಮಮಾ ಅತಿ ಶೀಘ್ರದಿಂದೆ ಲಂ ।
ಕೆಗೆ ತೆರಳಿಲ್ಕೆ ಸಾಗರಮನೀಗಳೆ ದಾಂಟಿದನಲ್ತೆ ವಾಯುಜಂ ॥ ೧ ॥

ಆದಕಾರಣ ನಡೆ, ಕುಮಾರನ ಪಾದಮೂಲವನ್ನೇ ಸೇರುವ (ಎಂದಿರ್ವರೂ ತೆರಳಿವರು).

[ಇದು ವಿಷ್ಕಂಭಕವು]

[ಬಳಿಕ ರಾಕ್ಷಸೀಗಣ ಪರಿವೃತೆಯಾದ ಸೀತೆಯು ಪ್ರವೇಶಿಸುವಳು]

ಸೀತೆ—ಹಾ! ಅಯ್ಯೋ! ಮಂದಭಾಗಿನಿಯಾದ ನಾನು ಅತಿ ಧೀರೆಯಾಗಿರುವೆನಲ್ಲವೆ! ಆರ್ಯಪುತ್ರನನ್ನು ಬಿಟ್ಟು, ರಾಕ್ಷಸರಾಜಭವನಕ್ಕು ಯ್ತಂದು, ಹಿತವೂ ಯೋಗ್ಯವೂ ಅಲ್ಲದ ಸ್ವೇಚ್ಛಾಲಾಪಗಳನ್ನು ಕೇಳುತ್ತಿದ್ದರೂ ಭಾಗ್ಯಹೀನೆಯು ಬದುಕಿರುವೆನಲ್ಲಾ! ಅಥವಾ, ಆರ್ಯಪುತ್ರನ ಕಣೆಯ ನಂಬಿಕೆಯಿಂದ ಹೇಗಾದರೂ ಪ್ರಾಣವನ್ನುಳಿಸಿಕೊಂಡಿರುವೆನು. ಆಹಾ! ಇದೇನಿದು! ಜ್ವಲಿಸುತ್ತಿರುವ ಕುಲಿಮೆಯ ಉರಿಯಲ್ಲಿ ನೀರನ್ನು ಚೆಲ್ಲಿದಂತೆ ಈಗ ತಾನೇ ನನ್ನ ಮನಸ್ಸಿಗೆ ಸ್ವಲ್ಪ ಮಟ್ಟಿಗೆ ನೆಮ್ಮದಿಯುಂಟಾಗುತ್ತಿರುವುದು. ಒಂದು ವೇಳೆ ಆರ್ಯಪುತ್ರನು ನನ್ನ ವಿಷಯದಲ್ಲಿ ಪ್ರಸನ್ನನಾಗಿರಬಹುದೆ?

[ಆಮೇಲೆ ಕೈಯಲ್ಲಿ ಉಂಗುರವನ್ನು ಹಿಡಿದ ಹನುಮಂತನು ಪ್ರವೇಶಿಸುವನು]

ಹನೂ— (ಲಂಕೆಯನ್ನು ಪ್ರವೇಶಿಸಿ) ಆಹಾ! ರಾವಣನ ಮನೆಯ ಸೌಂದರ್ಯವು ಸೊಗಸಾಗಿರುವುದು—

ಚಂ॥ ಕನಕದೆ ಗೆಯ್ದ ಚಿತ್ರತರ ತೋರಣದೋಳಿಯನಾಂತು ಮತ್ತೆಯುಂ ।
ಘನತರಮಾದ ರನ್ನ ಪವಳಂಗಳಿನೊಪ್ಪುವ ಭೂಮಿ ಭಾಗದಿಂ ॥
ದನುಗೊಳಿಸುತ್ತು ಮಿಟ್ಟ ಸುವಿನಿರ್ಮಲಮಾದ ವಿಮಾನಪಙ್ಕ್ತಿಯಿಂ ।
ದನಿಮಿಷ ರಾಜಧಾನಿಯವೊಲಂಬರದೊಳ್ ಗಡ ಲಂಕೆ ರಾಜಿಕುಂ ॥ ೨ ॥

ಅಹಹಾ—

ಕಂ॥ ವರ ರಾಜಲಕ್ಷ್ಮಿಯುಂ ಮೇಣ್ ।
ಪರತರಮೀ ಪುರಿಯನೊಂದಿಯುಂ ದಶಕಂಠಂ ॥
ನೆರೆ ದುರ್ಮಾರ್ಗದೊಳಡಿಯಿ ।
ಟ್ಟಿರವಿಂಗೆ ಸಮೂಲಮಾಗಿ ಕೇಡಂ ಕಜಿ೯ಪಂ ॥ ೩ ॥

(ಎಂದು ಸುತ್ತಲೂ ಸಂಚರಿಸಿ) ಲಂಕೆಯನ್ನೆಲ್ಲ ನಾನು ಸುತ್ತಿ ನೋಡಿ ದಂತಾಯಿತು.

ಚಂ॥ ಒಳಹೊರಗೋಜೆಗಳ್ ಬಳಿಯ ಸಾಲೆ ವಿಮಾನಗಳೋಳಿ ಮಿಾಯುವ ।
ಸ್ಥಳವರಸಿರ್ಪಗಾರಮುರು ದೇವ ಕುಲಂ ಕರುಮಾಡಮಂಗಳಂ ॥
ಪಳವನೆ ಪಾನಶಾಲೆ ಪವಡಿಪ್ಪೆಡೆಯಂ ಬಲವಂದೆನೆಲ್ಲಮಂ ।
ಬಳಸಿದೆನಾದೊಡಂ ನೃಪತಿಪತ್ನಿಯನೀಕ್ಷಿಸದಾದೆನಕ್ಕಟಾ ॥ ೪ ॥

ಅಯ್ಯೋ! ನನ್ನ ಶ್ರಮವೆಲ್ಲವೂ ವ್ಯರ್ಥವಾಯಿತು. ಇರಲಿ, ಈಯುಪ್ಪರಿಗೆಯ ತುದಿಯನ್ನು ಸೇರಿ ನೋಡುವೆನು. (ಹಾಗೆಯೇ ಮಾಡಿ) ಓ! ಇದು ಪ್ರಮದವನರಾಶಿಯು. ಇದನ್ನು ಪ್ರವೇಶಿಸಿ ಪರೀಕ್ಷಿಸಿ ನೋಡುವೆನು. (ಪ್ರವೇಶಿಸಿ ನೋಡಿ) ಆಶ್ಚರ್ಯ! ಪ್ರಮದವನ ಸಮೃದ್ಧಿಯು! ಇಲ್ಲಿ ಯಾದರೊ—

ಕಂ॥ ಕನಕಂ ಪವಳಂ ಪಚ್ಚೆಯಿ ।
ನನುಗೊಳಿಸಿದ ಪೆರ್ಮರಂಗಳಿಂದೆಸೆವ ತಳಂ ॥
ಮಿನುಪಗಗಳ್ ಗಗನದೊಳಿ ।
ಪರ್ಣನಿಮಿಷ ಪತಿ ವಿಹರಿಪೆಡೆಗೆ ಸಮನಾಗೆಸೆಗುಂ ॥ ೫ ॥

ಮತ್ತಂ—

ಮ॥ ಸಲೆ ಕಂಪೆಂ ಸುವಿಚಿತ್ರ ಧಾತು ರಸದಿಂ ರಂಜಿಪ್ಪ ಶೈಲಂಗಳಂ ।
ಪಲವುಂ ವಾರಿಜರಾಂಡಜಂಗಳಿನವೋಘಂ ತೋರ್ಪ ಕಾಸಾರ ಸಂ ॥
ಕುಲಮುಂ ಪುಷ್ಪ ಫಲಾಳಿಯಂ ಸತತಮಾಂತಿರ್ಪ್ಪ ದ್ರುಮಸ್ಥಾನಮುಂ ।
ಫಲವೇಂ ಪಾರ್ತೊಡಿವಂ ಖಳಾಲಯದೊಳಾ ವೈದೇಹಿಯಂ ಕಾಣದಾಂ ॥ ೬ ॥

ಓವೊ! ಇದೇನು ಈ ಪ್ರದೇಶದಲ್ಲಿ ಬೆಳಕಿನಂತೆ ಕಾಣುತ್ತಿರುವುದು? ಇರಲಿ, ಅದನ್ನು ನೋಡುವೆನು. (ಹೋಗಿ ನೋಡಿ) ಆಶ್ಚರ್ಯ! ಈಕೆ ಯಾರು?

ಕಂ॥ ಸವಿಕೃತಿ ರೂಪಿಣಿಯರ್ ದಾ ।
ನವಿಯರ ಬಳಿಸಿಂದೆಯಿಾ ಸುಮಧ್ಯಮೆ ನೀಲ ॥
ಚ್ಛವಿ ಮೇಘ ಮಧ್ಯದೊಳ್ ಮಿನು ।
ಗುವ ವಿದ್ಯುಲ್ಲೇಖೆಯಂತೆ ಶೋಭಿಸುತಿರ್ಪಳ್ ॥ ೭ ॥

ಈಕೆಯು—

ಚಂ॥ ಅಸಿತ ಸರೀಸೃಪಕ್ಕೆ ಸಮನಪ್ಪ ಸುವೇಣಿಯನೊಂದನಾಂತು ಸೈ ।
ತೆಸೆವ ತಳೋದರಂಬಡೆದು ಸಂತತಮೋಪನೊಳಿಟ್ಟು ಚಿತ್ತಮಂ ॥
ಬಿಸುಟುಣಿಸಂ ಬಳಿಲ್ದು ಬಡವಾಗುತೆ ಬಾಷ್ಪದೆ ನಾಂದ ವಕ್ತ್ರದಿಂ ।
ಬಿಸಿಲೊಳಗಂದಮಂ ಕಳೆದ ತಾಮರೆವೂಸರದಂತೆ ತೋರ್ದಪಳ್ ॥ ೮ ॥

ಆ! ಇದೇನು ದೀವಟಿಗೆಗಳ ಸಾಲು! (ನೋಡಿ) ಓಹೋ! ರಾವಣನು—

ಮ ॥ ಮಣಿಯಿಂದೊಪ್ಪುವ ಮೌಳಿಯಿಂ ಮಿನುಗುತುಂ ಕೆಂಪಾಂತ ಪೆರ್ಗಣ್ಗಳಿಂ।
ದೆಣಿಸಲ್ಕಾಡೆ ಮದಾಭಿಯುಕ್ತ ಗತಿಯಿಂ ಮತ್ತೇಭ ಸಲ್ಲೀಲೆಯಿಂ ॥
ಗಣಿತಾಶೇಷ ವಧೂಜನಂಗಳೊಡನೈತರ್ಪೀ ಖಳಾಧೀಶ ನೀ ।
ಕ್ಷಣಕಪ್ಪಂ ಹರಿಣೀ ಸಮೂಹ ಸಯುತಂ ಕಂಠೀರವಂಬೊಲ್ ಕರಂ ॥ ೯ ॥

ಈಗ ನಾನೇನು ಮಾಡಲಿ? (ಚಿಂತಿಸಿ ನೋಡಿ) ಸರಿ! ತಿಳಿಯಿತು. ಈಯಸುಗೆಯ ಮರವನ್ನೇರಿ ಪೊಟ್ಟರೆಯೊಳಗೆ ಕುಳಿತು ವರ್ತಮಾನ ವನ್ನೆಲ್ಲ ಚೆನ್ನಾಗಿ ತಿಳಿಯುವೆನು. (ಹಾಗೆಯೇ ಮಾಡುವನು).

[ಅನಂತರ ರಾವಣನು ಪರಿವಾರದೊಡನೆ ಬರುವನು]

ಮ ॥ ಧುರದೊಳ್ ಕ್ರುದ್ಧ ಸುರೇಭ ದಂತ ಕುಲಿಶ ವ್ಯಾಲೀಢ ವಕ್ಷಸ್ಥಳಂ ।
ಶರದೊಳ್ ನಿರ್ಜರ ದೈತ್ಯ ದಾನವ ಚಮೂ ವಿದ್ರಾವಣಂ ರಾವಣೇ ॥
ಶ್ವರನೆನ್ನಂ ತೊರೆದೀ ವಿವೇಕ ರಹಿತಳ್ ಮುಗ್ಧಾಕ್ಷಿಯೀ ಸೀತೆಯಾ ।
ನರನೊಳ್ ರಾಗದಿನಿರ್ಪುದಕ್ಕಟಮಿದೆಲ್ಲಂ ದೈವ ವಿಘ್ನಂ ದಿಟಂ ॥ ೧೦ ॥

(ಮೇಲೆ ನೋಡಿ) ಇವನು—ಈ ಚಂದ್ರಮನು—

ಕಂ॥ ವರ ರೂಪ್ಯ ರಚಿತ ಮುಕುರ ।
ಪ್ರರುಚಂ ಕುಮುದಾಪ್ತ ಬಂಧುವಿದೆಕೋ ಚಂದ್ರಂ ॥
ಕಿರಣಾಳಿಯಿನೆನ್ನೆರ್ದೆಯಂ ।
ಕೊರೆಯುತೆ ಬಾನೊಳಗೆ ಸೊಗದೆ ಮೂಡುತ್ತಿರ್ಪಂ ॥ ೧೧ ॥

(ಮುಂದೆ ಬಂದು) ಈ ಸೀತೆಯು ಮರದ ಬುಡವನ್ನು ಸೇರಿ ಧ್ಯಾನ ಸಂವೀತಚಿತ್ತೆಯಾಗಿ, ಉಪವಾಸದಿಂದ ಕಳೆಗುಂದಿದ ಮುಖವುಳ್ಳವ ಳಾಗಿ, ತನ್ನ ದೇಹದಲ್ಲಿಯೇ ಹುದುಗಿಕೊಳ್ಳಲು ಬಯಸುತ್ತಿರುವಳೋ ಎಂಬಂತೆ ಅತಿ ಗೂಢವಾದ ಸ್ತನೋದರಗಳಿಂದ ಕೂಡಿ, ರಕ್ಕಸಿಯರ ನಡುವೆ, ಮೋಡ ಮುಚ್ಚಿದಂದಿನ ಚಂದ್ರಲೇಖೆಯಂತೆ ಕುಳಿತಿರುವಳು. ಇವಳಾದರೋ—

ಕಂ॥ ಭೋಗವನೆನ್ನನುಮೀ ಭೂ।
ಭಾಗ್ಯಮುಮಂ ತೊರೆಯುತಾ ಮನುಷ್ಯನೊಳೀ ಸೈ॥
ತಾಗಿಸಿ ಮಾನಸಮಂ ಬಸ।
ಮಾಗದೆಯಿರ್ಪಳ್ ಗಡಾ ಇದರ್ಕಾನೇವೆಂ ॥ ೧೩ ॥

ಹನೂಮಾನ್—ಓಹೊ! ಚೆನ್ನಾಗಿ ತಿಳಿಯಿತು.

ಕಂ॥ ಇವಳೀ ಮೈಥಿಲಿಯಾ ಅರ।
ಗುವರಿ ಸಮಂತೆಮ್ಮ ರಾಮ ಹೃದಯೇಶ್ವರಿ ದಲ್॥
ತವೆ ಸಿಂಗಮನೀಕ್ಷಿಸಿ ಮಿಡು।
ಕುವ ಮೃಗಿಯಂದದೊಳೆ ಸುಗಿದು ತಪಿಸುತ್ತಿರ್ಪಳ್ ॥ ೧೪ ॥

ರಾವಣ—(ಹತ್ತಿರಕ್ಕೆ ಬಂದು)

ಕಂ॥ ಬಿಡು ಭಾಮಿನಿ ಕಡು ನೋಂಪಿಯ।
ನೊಡಂಬಡೌ ಸೀತೆ! ಸರ್ವಗಾತ್ರದಿನೆನ್ನಂ॥
ತಡೆಯದೆ ತೋಜಿಯುರಸಿಕನಂ।
ಜಡಜಾಕ್ಷಿ ಗತಾಯುಷಂ ಮನುಷ್ಯನನವನಂ ॥ ೧೫ ॥

ಸೀತೆ—(ಸ್ವಗತ) ಛೀ! ಈ ದುರುಳ ರಾವಣನು ನಗೆಗೀಡಾದವನಲ್ಲವೆ! ವಚನಸಿದ್ಧಿಯೆಂಬುದನ್ನೂ ಅರಿಯದಿರುವನು.

ಹನೂಮಾನ್—(ಕ್ರೋಧದಿಂದ—ಸ್ವಗತ) ಆಃ! ಈ ರಾವಣನು ಎಷ್ಟು ಕೊಬ್ಬಿರುವನು!

ಕಂ॥ ಇನ ಕುಲ ಸಂಭವನಾ ರಾ।
ಮನ ತೋಳ್ಬಲಮಂ ಮಹಾ ಶರಾಸನಮಂ ಮೇಣ್॥
ಘನ ಸಾಯಕಮುಮನಜುಯದೆ।
ತನುವೆರ್ಚಿಂತುಟು ಗತಾಯುಷಂ ಗಳಹಿದಪಂ ॥ ೧೬ ॥

ಅಹಾ! ರೋಷವನ್ನು ತಡೆದುಕೊಳ್ಳಲಾರೆನು. ಆಗಲಿ, ಪೂಜ್ಯನಾದ ರಾಮನ ಕೆಲಸವನ್ನು ನಾನೇ ಸಾಧಿಸುವೆನು; ಅಥವಾ,

ಕಂ॥ ರಾವಣನಂ ನಾಂ ಕೊಂದೊಡೆ।
ಯಾವಿರ್ಭವಿಸುವುದು ಕಾರ್ಯಸಿದ್ಧಿ ದಿಟಂ ಮೇಣ್ ॥
ಭಾವಿಸಲಂತಾಗದೆಯುವ।
ನೇ ವಧಿಸಿದೊಡೆನ್ನನಳಿಗುವುದು ಕಾರ್ಯಭರಂ ॥ ೧೬ ॥

ರಾವಣ—

ಕಂ॥ ವರ ತನು ತನು ಗಾತ್ರಿ ಮನೋ।
ಹರಾಕ್ಷಿ ನೀಲಾಬ್ಜಮಾಲೆಗೆಣೆ ಜಡೆಯಂ ಸಿಂ ॥
ಗರಿಸುತೆ ಬಹು ವಿಧ ಮಣಿ ಶೇ।
ಖರನೀ ದಶಶಿರನನೊಪ್ಪು ಮನವಿಡು ದೇವೀ ॥ ೧೭ ॥

ಸೀತೆ—ಹಾ! ವಿಧಿಯೇ! ಈ ಪಾಪಿ ರಕ್ಕಸನಿನ್ನೂ ಜೀವಿಸಿರುವುದನ್ನು ನೋಡಿದರೆ ಧರ್ಮವೇ ಬದಲಾಯಿಸಿದ ಹಾಗಿದೆಯಲ್ಲಾ!

ರಾವಣ—ಎಲೌ ದೇವಿ!

ಸೀತೆ—ಶಾಪವು.

ರಾವಣ—ಹಾ! ಹಾ!! ಹಾ!!! ಪತಿವ್ರತೆಯ ತೇಜಸ್ಸು ಆಶ್ಚರ್ಯಕರವು.

ಕಂ॥ ಸುರಖಾದಿ ದೇವರುಂ ದನು।
ಜರುಮೆನ್ನಿಂ ಭಗ್ನರಾದರಾಜಿಯೊಳಿಂತಾ।
ಗಿರ್ದ್ದಿರೆ ಸೀತೆಯು ಮೂಜ।
ಕ್ಷರಂಗಳಿಂ ಮೋಹವಾಂತೆನಾ ನಾನೀಗಳ್ ॥ ೧೮ ॥

(ತೆರೆಯುಳ್ಳಿ) ಮಹಾರಾಜನಿಗೆ ಜಯವಾಗಲಿ. ಭೋ! ದೇವಾ! ಸ್ವಾಮಿನ್! ಲಂಕೇಶ್ವರಾ! ಹತ್ತುಗಳಿಗೆಗಳಾದುವು; ಸ್ನಾನ ವೇಳೆಯು

ಮೀರುತ್ತಿರುವುದು; ಹೀಗೆ ಬಿಜಯಮಾಡಿಸಬೇಕು. (ಪರಿವಾರದೊಡನೆ ರಾವಣನು ತೆರಳುವನು).

ಹನೂಮಾನ್—ಆಃ! ರಾವಣನು ತೆರಳಿದನು; ರಕ್ಕಸಿಯರೂ ನಿದ್ರಿಸಿದರು. ದೇವಿಯನ್ನು ಸೇವಿಸಲು ಇದೇ ಸಮಯವು. (ಕೋಟರದಿಂದ ಹೊರಗೆ ಬಂದು) ಕಲ್ಯಾಣೀ! ವಿಜಯವಾಗಲಿ.

ಕಂ॥ ಅಟ್ಟಿದನೆನ್ನಂ ರಾಮಂ।
ಧಿಟ್ಟರಸಂ ನೇಱುದಂ ಸಮಂತುರೆ ನಿನ್ನಾ॥
ಕಟ್ಟಿರಕದ ಬೇಗೆಯೊಳಳ।
ವಟ್ಟೇಗಳ್ ಕೊಱಗಿ ಕೊಱಗಿ ಕುಂದಿಡ ವಗೆಯುಂ ॥ ೧೯ ॥

ಸೀತೆ—(ಆತ್ಮಗತ) ಇವನಾವನು? ಪಾಪಿ ರಾಕ್ಷಸನೇನಾದರೂ ತಾನು ಆರ್ಯಪುತ್ರನ ಸಂಬಂಧಿಯೆಂದು ನೆವಮಾಡಿಕೊಂಡು ಕಪಿರೂಪದಿಂದ ನನ್ನನ್ನು ಮೋಸಗೊಳಿಸಲು ಬಂದಿರಬಹುದೆ? ಆಗಲಿ! ಸುಮ್ಮನೆಯೇ ಇರುವೆನು.

ಹನೂಮಾನ್—ಇದೇನು! ಪೂಜ್ಯೆಯು ನಂಬದಿರುವಳು. ತಾಯೇ! ಬೇರೆ ಎಣಿಸಬೇಡ, ಕೇಳು—

ಕಂ॥ ಇಕ್ಷ್ವಾಕು ವಂಶ ದೀಪನ।
ಪಕ್ಷಂಬಿಡಿದಾ ಹರೀಶ್ವರಂ ನಿನ್ನಂ ಪ್ರ॥
ತ್ಯಕ್ಷಿಸೆ ಕಳಿಪಿದನೆನ್ನಂ।
ಲಕ್ಷಿಸುದಿದು ನನ್ನಿ ತಾಯೆ ನಾಂ ಹನುಮಂತಂ ॥ ೨೦ ॥

ಸೀತೆ—(ಸ್ವಗತ) ಯಾರಾದರೂ ಆಗಿರಲಿ; ಆರ್ಯಪುತ್ರನ ಹೆಸರನ್ನು ಕೊಂಡಾಡುವುದರಿಂದ ಇವನೊಡನೆ ಮಾತಾಡುವೆನು. (ಪ್ರಕಾಶ) ಭದ್ರ! ಆರ್ಯಪುತ್ರನ ವರ್ತಮಾನವೇನು?

ಹನೂಮಾನ್—ಮಾತೆ! ಲಾಲಿಸು.

ಮ ॥ ಉಣಿಸಂ ಬಿಟ್ಟು ಬಱಲ್ದು ಬೆಳ್ಪುವಡೆದುಂ ಶ್ಯಾಮಾನನಂದಾೞ್ದು ಮೇ।
ಕ್ಷಣದೊಳ್ ನಿನ್ನ ಗುಣಂಗಳಂ ಗಣಿಸುತಂ ಕಂಗೆಟ್ಟು ಲಾವಣ್ಯದಿಂ ॥
ಜೆಣಸುತ್ತುಂ ತನು ಹೇಯಮೆಂದು ಧೃತಿಗುಂದುತ್ತುಂ ಮನೋಜಾತನೈ।
ಗಣೆಯಿಂದಂ ಕಡುನೊಂದು ಕಂಬನಿಯನಾಂದಿರ್ಪಕ್ಷಿಯಿಂದಿರ್ದಪಂ ॥ ೨೧॥

ಸೀತೆ—(ತನ್ನಲ್ಲಿಯೇ) ಹಾಹಾ! ಆರ್ಯಪುತ್ರನು ಹೀಗೆ ಅಱಲುವನೆಂಬುದನ್ನು ಆಲಿಸಿ ನಿರ್ಭಾಗ್ಯೆಯು ನಾಚಿಕೆಪಡುವೆನು. ಈ ವಾನರನು ಹೇಳುವುದು ನಿಜವೇ ಆಗಿದ್ದರೆ ಆರ್ಯಪುತ್ರನ ವಿರಹ ಪರಿಶ್ರಮವೂ ಕೂಡ ನನಗೆ ಸಫಲವಾಯಿತೆಂದೇ ಅಱಿಯುವೆನು. ಈ ಜನದ ವಿಷಯದಲ್ಲಿ ಆರ್ಯಪುತ್ರನಿಗಿರುವ ಮರುಕವನ್ನೂ ಬಱಲಿಕೆಯನ್ನೂ ಕೇಳಿ ನನ್ನ ಚಿತ್ತವು ಸುಖ ದುಃಖಗಳ ಮಧ್ಯದಲ್ಲಿ ತೂಗಾಡುವಂತಿರುವುದು. (ಪ್ರಕಾಶ) ಭದ್ರ! ಆರ್ಯಪುತ್ರನನ್ನು ನೀವು ಸೇರಿದ ಬಗೆ ಹೇಗೆ?

ಹನೂಮಾನ್—ದೇವಿ! ಚಿತ್ತವಿಸು—

ಮ ॥ ಇರಿದುಂ ವಾನರರಾಜನಂ ಸಮರದೊಳ್ ತ್ವತ್ಕಾರಣಂ ರಾಮನಾ।
ಧರೆಯೆಲ್ಲಕ್ಕಧಿನಾಥನಂ ಗೆಯ್ಯಲೊಡಂ ಸುಗ್ರೀವನೆಮ್ಮೆಲ್ಲರಂ ॥
ಭರದಿಂದಟ್ಟಿದನಿಂತು ನಿನ್ನನರಸಲ್ ದಿಗ್ಭಾಗಮೆಲ್ಲಕ್ಕಮಾಂ।
ಬರುತಾ ಪರ್ದಿನ ಮಾತಿನಿಂದೆ ಬಳಿಯಂ ಸೇರ್ದಂ ನೃಪೇಂದ್ರಾತ್ಮಜೇ ॥ ೨೨॥

ಮತ್ತು, ಹೀಗೆಯೇ............

ಸೀತೆ—ಆಹಾ! ಆರ್ಯಪುತ್ರನನ್ನು ಈ ರೀತಿ ದುಃಖಕ್ಕೆ ಗುರಿಗೆಯ್ದ ದೈವವು ನಿಜವಾಗಿಯೂ ನಿಷ್ಕರುಣಿಯು.

ಹನೂಮಾನ್—ಆರ್ಯೆ! ಅಱಲದಿರು. ರಾಮನಾದರೊ—

ಕಂ ॥ ಅಂತು ಮಹಾ ಧನುವಂ ಬಱ।
ಸಾಂತು ಮಹಾ ಕಪಿ ಕದಂಬಮುಂ ರಾವಣನಂ ॥
ಸ್ವಾಂತಾಭಿಮತಂ ಕೊಲ್ಲ।
ಲ್ಕೆಂತುಂ ಲಂಕಾಪುರಕ್ಕೆ ತಪ್ಪಿದೆ ಬರ್ಪಂ ॥ ೨೩ ॥

ಸೀತೆ—ಆ! ನಾನೇನಾದರೂ ಕನಸನ್ನು ಕಂಡೆನೇ! ಭದ್ರ! ಇದು ದಿಟವೇ? ನಾನರಿಯೆನು.

ಹನೂಮಾನ್—(ತನ್ನಲ್ಲಿ) ಅಯ್ಯೋ! ಕಷ್ಟ! ಕಷ್ಟ!

ಕಂ॥ ಪತಿ ವತ್ಸಲೆಯಾದೀ ಸತಿ ।
ಪತಿಯ ಪರಾಕ್ರಮುವನಱಿತುಮಿಂತುಟು ಶೋಕಾ ॥
ವೃತೆಯಾಗಿ ಶರೀರಾಂತರ ।
ಗತೆಯಂದವೆ ಪೇೞ್ಕೆ ನೆಜ್ಜದಿರ್ದಪಳಾಹಾ ॥ ೨೪ ॥

(ಪ್ರಕಾಶ) ಪೂಜ್ಯೆ! ಇದೊ, ಈಗಲೇ—

ಕಂ॥ ವರ ಚಾಪ ಹಸ್ತನಂ ಸಿ ।
ನ್ನರಸನನರಗುವರಿಯಿಲ್ಲಿಗಾಂ ಕರೆತರ್ಪೆಂ ॥
ತೊರೆ ಸಂದೇಹವುನೆನ್ನೊಳ್ ।
ನರವರನೊಡನಿರ್ದು ದುಗುಡಮಂ ಪರಿಹರಿಸೌ ॥ ೨೫ ॥

ಸೀತೆ—ಭದ್ರ! ನನ್ನ ಈಯವಸ್ಥೆಯನ್ನು ಕೇಳಿ ಆರ್ಯಪುತ್ರನು ದುಃಖಪರವಶನಾಗದ ಹಾಗೆ ನನ್ನ ವೃತ್ತಾಂತವನ್ನಾತನಿಗೆ ಬಿನ್ನವಿಸು.

ಹನೂಮಾನ್—ದೇವಿಯಪ್ಪಣೆಯಂತಾಗಲಿ.

ಸೀತೆ—ನಡೆ, ಕಾರ್ಯವು ಕೈಗೂಡಲಿ.

ಹನೂಮಾನ್—ಅನುಗೃಹೀತನಾದೆನು. (ನಡೆದು) ನಾನು ಬಂದುದನ್ನು ರಾವಣನಿಗೆ ಹೇಗೆ ತಿಳಿಯಿಸಲಿ? (ಚಿಂತಿಸಿ) ಗೊತ್ತಾಯಿತು.

ಉ॥ ಕೋಗಿಲೆವಿಂಡಿನಿಂ ಕಲೆತು ತಾವರೆ ತಂಡದಿನಿಂಬುವೆತ್ತು ಸೊಂ ।
ಪಾಗೆಸೆವಾಪನೀಜ ತತಿಯಿಂ ಮಿಸುಪೀ ವನಮಂ ತ್ರಿಕೂಟಮೆಂ ॥
ಬೀ ಗಿರಿಯಂ ಮುಗಿಲ್ಸಿರಿಯನೆನ್ನಡಿ ಕೈಗಳಿನಿಕ್ಕಿ ಧೂಳಿಯಂ ।
ತಾಗಿಸಿ ರಾವಣಂ ಮನದೆ ಪೆರ್ಚುಗೆಯಂ ಬಿಡುವಂತೆ ಮಾಡುವೆಂ ॥ ೨೬ ॥

ತೃತೀಯಾಂಕ

ಶಂಕುಕರ್ಣ—(ಪ್ರವೇಶಿಸಿ) ಯಾರದು ಕಾಂಚನ ತೋರಣದ ಬಾಗಿಲನ್ನು ಕಾಯುವವರು?

ಪ್ರತಿಹಾರಿ—(ಪ್ರವೇಶಿಸಿ) ಅಯ್ಯಾ! ನಾನು ವಿಜಯೆಯು; ಮಾಡತಕ್ಕದೇನು?

ಶಂಕುಕರ್ಣ—ವಿಜಯೇ! ಮಹಾರಾಜನಾದ ಲಂಕೇಶ್ವರನ ಸನ್ನಿಧಿಗೆ ಬೇಗ ಹೋಗಿ ಅಶೋಕವನವೆಲ್ಲವೂ ಹಾಳಾಯಿತೆಂದು ಹೀಗೆ ಅರಿಕೆಮಾಡು:—

ಉ ॥ ಆದರ ಭಾವಮುಳ್ಳ ಕತದಿಂಡೆಯುವಾವೆಡೆ ರಾಜ ಪಕ್ಷಿ ಮಂ ।
ಡೋದರಿ ಕೊಯ್ಯಳೋ ತಳಿರ್ಗಳಂ ಮಿಗೆ ಸಿಂಗರಪಟ್ಟಿಯಿರ್ದೊಡಂ ॥
ಮೋದುತೆ ತೀಡನೆಲ್ಲಿ ಮಲಯಾನಿಲನಂಜುತೆ ಬಾಲ ಶಾಖಿ ಮುಂ ।
ತಾದುವನಾ ಅಶೋಕ ವನದೊಳ್ ಸಕಲಂ ಸಲೆ ಭಗ್ನಮೆಂದೆನಲ್ ॥ ೧ ॥

ಪ್ರತಿಹಾರಿ—ಅಯ್ಯಾ! ನಿತ್ಯವೂ ಪ್ರಭುವಿನ ಪಾದಮೂಲದಲ್ಲಿಯೇ ಸೇವಿಸುತ್ತಿರುವ ಜನದ ಅಪೂರ್ವ ಸಂಭ್ರಮವಿದಾವುದು?

ಶಂಕುಕರ್ಣ—ಎಲೌ! ಕೆಲಸವು ಕೆಡುವುದು, ಬೇಗನೆ ಹೋಗಿ ಬಿನ್ನವಿಸು.

ಪ್ರತಿಹಾರಿ—ಇದೊ ಬಿನ್ನವಿಸುವೆನು. (ತೆರಳುವಳು)

ಶಂಕುಕರ್ಣ—(ಮುಂದೆ ನೋಡಿ) ಓ! ಮಹಾರಾಜನಾದ ಲಂಕೇಶ್ವರನು ಇತ್ತಲಾಗಿಯೇ ಬರುತ್ತಿರುವನು. ಇವನಾದರೊ—

ಕಂ॥ ವರ ವಿಮಲ ಕಮಲ ಸಮ ಭೀ ।
ಕರ ನೇತ್ರಂ ಮಿಸುಪ ಮಿಸುನಿ ದೀವಿಗೆವೆಳಕಿಂ ॥
ತ್ವರಿತದಿನಿದೆಕೊಳ್ ಕೋಪದೆ ।
ಬರುತಿರ್ಪಂ ಪ್ರಳಯ ಕಾಲದಾದಿತ್ಯಂಬೋಲ್ ॥ ೨ ॥

[ಆಮೇಲೆ, ಮೇಲೆ ಹೇಳಿದ ಹಾಗೆ ರಾವಣನು ಬರುವನು]

ರಾವಣ—

ಕಂ॥ ಆಯೋನಿದು ಪೊಸ ನುಡಿ ಸರಿ ।
ಯಾಯೆಲ್ಲಮನುಸಿರ ಬೇಗದಿಂದಂ ಘಡಯೇಂ ॥
ಸಾಯಲ್ಕಿಚ್ಛಿಪ ಧೀರಂ ।
ಸೈಯಾವಂ ವನ ವಿಭಂಗದೇಡಿಪನೆನ್ನಂ ॥ ೩ ॥

ಶಂಕುಕರ್ಣ—(ಸವಿನಾಪಿಸಿ) ಮಹಾರಾಜನೆ! ವಿಜಯಿಯಾಗು. ಎಲ್ಲಿಂದಲೋ ಇಲ್ಲಿಗೊಂದು ಕೋಡಗವು ಬಂದು ಅಶೋಕವನವನ್ನೆಲ್ಲ ವನ್ನೂ ಧೂಳಿಮಾಡಿಬಿಟ್ಟಿತು.

ರಾವಣ—(ತಿರಸ್ಕಾರದಿಂದ) ಏನು? ಕೋಡಗವೆ? ಸರಿ! ಹೋಗಿ ಹಿಡಿದುಕೊಂಡು ಬೇಗ ಬಾ.

ಶಂಕುಕರ್ಣ—ಮಹಾರಾಜನಾಜ್ಞೆ. (ಎಂದು ತೆರಳುವನು)

ರಾವಣ—

ಕಂ॥ ರಣದೊಳ್ ಮೂಲೋಕಮನುರೆ ।
ದಣಿಯಿಸಿದೆನಗಾ ಸುರರ್ ಕುಮಿಬಿದಮಿದನೆಂತೋ ॥
ಎಣಿಸಿರಲೊಡನೆಯೆ ಪಡೆಗಮ ।
ದುರ್ಗಣಿಗಳ್ ಸಲೆ ತಮ್ಮ ಮೌಢ್ಯಕೆಣೆಯಂ ಫಲಮಂ ॥ ೪ ॥

ಶಂಕುಕರ್ಣ—(ಬಂದು) ಮಹಾರಾಜನೇ! ಆ ವಾನರನು ಮಹಾ ಪರಾಕ್ರಮಿಯಾಗಿರುವನು. ಸಾಲವೃಕ್ಷಗಳನ್ನೆಲ್ಲ ತಾವರೆಯ ದಂಟಿನಂತೆ

ಕಿತ್ತುಹಾಕಿದನು; ಮುಷ್ಟಿಯಿಂದ ಪಾರು ಪರ್ವತವನ್ನು ಪುಡಿಮಾಡಿದನು; ಅಂಗೈಗಳಿಂದ ಬಳ್ಳಿವನೆಗಳನ್ನೆಲ್ಲ ಹೊಸಕಿಬಿಟ್ಟನು; ಆರ್ಭಟಿಸಿ ಪ್ರಮದ ವನಪಾಲರನ್ನು ಮೂರ್ಛೆ ಕೆಡವಿದನು; ಅವನನ್ನು ಹಿಡಿಯಲು ಬಲವಾದ ಸೇನೆಗೇ ಆಜ್ಞಾಪಿಸಬೇಕು.

ರಾವಣ—ಹಾಗಾದರೆ ಆ ಕಪಿಯನ್ನು ಹಿಡಿತರಲು ಸಾವಿರ ದಂಡಾಳುಗಳನ್ನು ಕಳುಹಿಸು.

ಶಂಕುಕರ್ಣ—ಮಹಾರಾಜನಾಜ್ಞೆ. (ಹೋಗಿ ಬಂದು) ಮಹಾರಾಜನೇ!

ಕಂ॥ ತರು ಯೋಧಿಯಾದವಂ ವಾ ।
ನರನೆಮ್ಮಯ ಪೆರ್ಮರಂಗಳಿಂದೆಮ್ಮಯ ಕಿಂ ॥
ಕರ ಸೇನಾಬಲಮನಿತಂ ।
ತುರಿಪದೊಳೇ ಕೊಂದನೊಂದನುಳಿಯದ ತೇಜದಿಂ ॥ ೫ ॥

ರಾವಣ—ಹೇಗೆ? ಎಲ್ಲರನ್ನೂ ಕೊಂದನೇ? ಹಾಗಾದರೆ ಆ ಕೋಡಗವನ್ನು ಹಿಡಿತರಲು ನಮ್ಮ ಅಕ್ಷಕುಮಾರನಿಗೆ ತಿಳಿಯಿಸು.

ಶಂಕುಕರ್ಣ—ಮಹಾರಾಜನಾಜ್ಞೆ. (ಹೋಗುವನು)

ರಾವಣ—(ಆಲೋಚಿಸಿ)

ಕಂ॥ ಕುವರಂ ಕಣೆಯೊಳ್ ನೆರೆ ಕ ।
ಲ್ತವನುಂ ಶೂರನುಮದಲ್ಲದೆಯೆ ಬಲ್ಲಿದನುಂ ॥
ತವೆಯುದಜುಂಡಾ ಕಪಿಯುಂ ।
ತವಕದೆ ಪಿಡಿತರ್ಪನಿಲ್ಲದಿರೆ ಕೊಲ್ವಂ ದಲ್ ॥ ೬ ॥

ಶಂಕುಕರ್ಣ—(ಬಂದು) ಮಹಾರಾಜನೇ! ಮತ್ತೊಂದು ಸೈನ್ಯವನ್ನು ಕಳುಹಿಸಬೇಕು.

ರಾವಣ—ಏಕೆ?

ಶಂಕುಕರ್ಣ—ಮಹಾರಾಜನು ಲಾಲಿಸಬೇಕು: ಕಪಿಯನ್ನು ಹಿಡಿತರಲು ಹೊರಟ ಕುಮಾರನನ್ನು ಕಂಡು, ಮಹಾರಾಜನಾಜ್ಞೆಯಿಲ್ಲದಿದ್ದರೂ ಐವರು ಸೇನಾಪತಿಗಳು ಅವನನ್ನು ಬೆಂಬಟ್ಟಿವಿಡಿದರು.

ರಾವಣ—ಆಮೇಲಾಮೇಲೆ?

ಶಂಕುಕರ್ಣ—ಆಮೇಲೆ ಆ ಕಪಿಯು ಇದಿರಾಗಿ ಬರುತ್ತಿರುವ ಅವರನ್ನು ಕಂಡು ಸ್ವಲ್ಪ ಹೆದರಿಕೊಂಡವನಂತೆ ನಟಿಸುತ್ತ ತೋರಣವನ್ನು ಸೇರಿ ಚಿನ್ನದ ಪರಿಘೆಗಳಿಂದ ಸೇನಾಪತಿಗಳೈವರನ್ನೂ ಹೊಡೆದು ಕೆಡವಿದನು.

ರಾವಣ—ಆಮೇಲೆ ಆಮೇಲೆ?

ಶಂಕುಕರ್ಣ—ಅಕ್ಷಕುಮಾರನನ್ನು

ಮ॥ ಸ್ರ॥ ಕಿನಿಸಿಂ ಕಣ್ಕೆಂಕಮಾಗಲ್ ತುರಿಪದೆ ರಥ ವಾಹಂಗಳಂ ಪೋಗಲಟ್ಟು।
ತ್ತಿನಸುಂ ನೀಲಾಭ್ರಕಲ್ಪಂ ಪರಮ ಲಘುತರಂ ಬಾಣ ಜಾಲಂಗಳಂ ತ॥
ಳ್ತು ನಿಸಲ್ಕಾ ಅಂಬನೆಲ್ಲಂ ಕೊಡವಿ ಕೆಡಪುತುಂ ಕೋಡಗಂ ತೇರ್ಗೆ ಚಿಮ್ಮು।
ತ್ತೆ ನಡುಂಗಟ್ಟಿಂ ಪಿಡುಂಗಾನನಮುಳಸುವವೋಲ್ ಮುಷ್ಟಿಯಿಂ ಕುತ್ತಿ
ಕೊಂದಂ ॥ ೭ ॥

ರಾವಣ—(ರೋಷದಿಂದ) ಆಃ! ಹೇಗೆ ಹೇಗೆ? ಕೊಂದನೆಂದೇ?

ಕಂ॥ ಆರರೇ ನೀನಿರ ನಾನೇ।
ತೆರಳುತೆಯಾ ದುರುಳನೆನಿಪ ಕಗೋ೯ಡಗನಂ॥
ಭರದಿಂ ಬೂದಿಯನಾಗಿಪೆ।
ನುರಿವೆನ್ನೀ ಮುಟಿ್ಟಸುವೆಂಕಿ ಕಿಡಿಗಡಣಗಳಿಂ ॥ ೮ ॥

ಶಂಕುಕರ್ಣ—ಮಹಾರಾಜನೇ! ಶಾಂತನಾಗು. ಅಕ್ಷಕುಮಾರನನ್ನು ಕೊಂದುದನ್ನು ಕೇಳಿ ಮುನಿಸಿನಿಂದ ಕೂಡಿದೆರ್ದೆಯುಳ್ಳವನಾಗಿ ಇಂದ್ರಜಿತ್ಕುಮಾರನು ಕಪಿಗಿದುರಾಗಿ ಹೊರಟಿರುವನು.

ರಾವಣ—ಹಾಗಾದರೆ ಹೋಗಿ ಮುಂದಿನ ಸಂಗತಿಯನ್ನು ತಿಳಿದು ಬಾ.

ಶಂಕುಕರ್ಣ—ಮಹಾರಾಜನಾಜ್ಞೆ. (ಹೋಗುವನು)

ರಾವಣ—ಕುಮಾರನಾದರೆ ಅಸ್ತ್ರವಿದ್ಯಾ ನಿಪುಣನು—

ಕಂ॥ ತುಳಿಲಾಳ್ತನಕ್ಕೆ ಬವರದೊ।
ಳಳಿವೋ ಮೇಣ್ ಗೆಲ್ವೊ ಬಯಕೆ ದಿಟವಾದೊಡೆಯುಂ ॥
ಕೊಳುಗುಳವಿದು ತಗದೆಸಕಂ।
ಕಳವಳವಾದಪುದು ಮನದ ಬೇನೆಯಿನೆನಗಂ ॥ ೯ ॥

ಶಂಕುಕರ್ಣ—(ಪ್ರವೇಶಿಸಿ) ಮಹಾರಾಜಾ! ಲಂಕೇಶ್ವರಾ! ಭದ್ರಮುಖಾ! ವಿಜಯವು ವಿಜಯವು!

ಕಂ॥ ಕುವರಂಗಂ ಕೋಡಗಕಂ।
ಬವರಂ ಬಿಡುವಿಲ್ಲದಂತೆ ನಡೆದುದು ಮತ್ತಂ ॥
ತವಕದೊಳೀಗಳೆ ಕಪಿಯುಂ।
ಕವಿದುಂ ನೇಣಿಂದೆ ಕಟ್ಟಿದಂ ಸುಕುಮಾರಂ ॥ ೧೦ ॥

ರಾವಣ—(ತಲೆದೂಗುತ್ತ) ಇಂದ್ರಜಿತನು ಶಾಖಾಮೃಗವನ್ನು ಕಟ್ಟಿದನೆಂಬುವುದರಲ್ಲಿ ಆಶ್ಚರ್ಯವೇನು? ಯಾರಲ್ಲಿ?

ರಾಕ್ಷಸ—(ಪ್ರವೇಶಿಸಿ) ಮಹಾರಾಜನಿಗೆ ವಿಜಯವಾಗಲಿ.

ರಾವಣ—ಹೋಗಿ ವಿಭೀಷಣನನ್ನಿಲ್ಲಿಗೆ ಬರಹೇಳು.

ರಾಕ್ಷಸ—ಮಹಾರಾಜನಾಜ್ಞೆ. (ಹೋಗುವನು)

ರಾವಣ—(ಶಂಕುಕರ್ಣನೊಡನೆ) ನೀನೂ ಹೋಗಿ ಆ ಕೋತಿಯನ್ನಿಲ್ಲಿಗೆ ಕರೆತರುವುದು.

ಶಂಕುಕರ್ಣ—ಮಹಾರಾಜನಾಜ್ಞೆ. (ತೆರಳುವನು)

ರಾವಣ—(ಚಿಂತಿಸಿ) ಹಾ! ಕಷ್ಟವು.

ಕಂ॥ ಬಿಡುಗಣ್ಣರುಮಡಗುಣಿಗಳು ।
ಮೊಡವೆರೆದೊಡಮಜುಡು ಲಂಕೆ ಬಗೆಯೊಳಮೊಣಿಸಲ್ ॥
ನುಡಿಯಿಂತಿರೆ ರಾವಣನಂ ।
ಕಡೆಗಣಿಸುತೆ ವಾನರಂ ಪ್ರವೇಶಿಸಿದನಲೇ ॥ ೧೧ ॥

ಮ॥ ಸ್ರ॥ ನೆರೆ ಮೂಲೋಕಂಗಳಂ ದಾನವ ಸುರ ಸಹಿತಂ ಯುದ್ಧದೊಳ್ ಗೆಲ್ದು ಗರ್ವಂ ।
ಪಿರಿದಾಗಲ್ ಬೆಳ್ಳಿವೆಟ್ಟಂ ಶಿವ ಗಣ ಯುತಮಂ ಭುಲ್ಲನಳ್ಳಾಡಿಸುತ್ತಂ ॥
ವರಮಂ ತಾಟ್ಟಿತ್ತಣಿಂ ಮತ್ತಗ ಸುತೆ ಶಿವ ವಾಹಂಗಳಂ ನೋಡದಾನೈ ।
ತರೆಯಾಗಳ್ ಶಾಪಮಂ ನೀಡಲವರದುವೆ ದಿಾರೂಪದಿಂಬರ್ಕು ವಿಾಗಳ್ ॥ ೧೨ ॥

[ಬಳಿಕ ವಿಭೀಷಣನು ಬರುವನು]

ವಿಭೀಷಣ —(ವಿಚಾರಪಡುತ್ತ) ಅಯ್ಯೋ! ಮಹಾರಾಜನ ಬುದ್ಧಿಯು ವಿಪರೀತವೇ ಆಯಿತಲ್ಲಾ!

ಕಂ॥ ಬಹು ವಿಧದಿಂ ಬೋಧಿಸಿದಂ ।
ಮಹೀಜೆಯಂ ಮರಟ್ಟು ಪತಿಯ ಸನ್ನಿಧಿಗಟ್ಟೆಂ ॥
ದಹಹಾ ಏವಂ ಕೆಳೆಯ ।
ಗರ್ಹಿತಮಾದೆನುತೆನ್ನ ನುಡಿಯನಾಲಿಸನರಸಂ ॥ ೧೩ ॥

(ಒಳಗೆ ಬಂದು) ಮಹಾರಾಜನಿಗೆ ಜಯವಾಗಲಿ.

ರಾವಣ – ವಿಭೀಷಣಾ! ಬಾ ಬಾ, ಕುಳಿತುಕೊ.

ವಿಭೀಷಣ — ಇದೊ ಕುಳಿತುಕೊಳ್ಳುವೆನು. (ಕುಳಿತುಕೊಳ್ಳುವನು)

ರಾವಣ – ವಿಭೀಷಣಾ! ಇದೇನು? ಖಿನ್ನನಾಗಿ ಕಾಣುತ್ತಿರುವೆಯಲ್ಲಾ!

ವಿಭೀಷಣ — ಆಶ್ರಯಗೊಂಡ ಭೃತ್ಯಜನದ ಮಾತನ್ನು ಸ್ವಾಮಿಯು ಗ್ರಹಿಸದಿದ್ದರೆ ಖಿನ್ನತೆಯೇ ಅಲ್ಲವೆ?

ರಾವಣ—ವಿಭೀಷಣಾ! ಈ ಕಥೆಯನ್ನಿಲ್ಲಿಗೆ ನಿಲ್ಲಿಸಿಬಿಡು. ನೀನೂ ಸಹ ಹೋಗಿ ಆ ವಾನರನನ್ನು ಹಿಡಿದುಕೊಂಡು ಬಾ.

ವಿಭೀಷಣ—ಮಹಾರಾಜನಾಜ್ಞೆ. (ತೆರಳುವನು)

[ಆಮೇಲೆ ರಾಕ್ಷಸರು ಹನುಮಂತನನ್ನು ಹಿಡಿದುಕೊಂಡು ಬರುವರು]

ಎಲ್ಲರೂ—ಆಃ! ಇತ್ತ! ಇತ್ತ!

ಹನೂಮಾನ್—

ಕಂ॥ ದುರುಳಂ ರಕ್ಕಸನೆನ್ನಂ।
ಸೆರೆವಿಡಿಯಲ್ಕಾರ್ತನಿಲ್ಲ ಮೇಣ್ ರಾವಣನಂ॥
ಕರವಿಾಕ್ಷಿಪ ಮನದಾಸೆಯಿ।
ನಿರದಾನೆಯುಪೇಕ್ಷಿಸಿಂತು ಸಿಲ್ಕಿದನಾದೆಂ ॥ ೧೪ ॥

(ಬಳಿಸಾರ್ದು) ಎಲೈ! ರಾಜನೆ! ಚೆನ್ನಾಗಿರುವೆಯಾ!

ರಾವಣ—(ತಿರಸ್ಕಾರದಿಂದ) ವಿಭೀಷಣಾ! ಇದೇ ಏನು ಇವನ ಕೆಲಸ?

ವಿಭೀಷಣ—ಮಹಾರಾಜನೆ! ಇದಕ್ಕಿಂತಲೂ ಹೆಚ್ಚಿನದುಂಟು.

ರಾವಣ—ನೀನು ಹೇಗೆ ಬಲ್ಲೆ?

ವಿಭೀಷಣ—ಮಹಾರಾಜನು ಅವನನ್ನು ನೀನಾರೆಂದು ಪ್ರಶ್ನೆ ಮಾಡುವವನಾಗಲಿ.

ರಾವಣ—ಎಲಾ ಕಪಿಯೆ! ನೀನಾರು? ಯಾವ ಕಾರಣದಿಂದೆ ನಮ್ಮ ಅಂತಃಪುರವನ್ನು ಹೊಕ್ಕು ತತ್ತರಗೊಳಿಸಿದೆ?

ಹನೂಮಾನ್—ಅಯ್ಯಾ!

ಕಂ॥ ಅರಿಯೈ ಆಂ ಹನುಮಂತಂ।
ಮರುದಂಜನೆಯರ್ಗೆ ಪುಟ್ಟಿದೌರಸ ಪುತ್ರಂ॥
ವರ ರಘುರಾಮಂ ಕಳುಪಲ್।
ಭರದಿಂದೆಯ್ತಂದೆನಿಲ್ಲಿಗಾನತಿ ಮುದದಿಂ ॥ ೧೫ ॥

ವಿಭೀಷಣ—ಮಹಾರಾಜನೆ! ಕೇಳಿದೆಯಾ?

ರಾವಣ—ಕೇಳಿದರೇನು?

ವಿಭೀಷಣ—ಹನೂಮಾನ್! ಪೂಜ್ಯನಾದ ರಾಘವನು ಹೇಳಿದುದೇನು?

ಹನೂಮಾನ್—ಎಲೈ! ರಾಮನಪ್ಪಣೆಯನ್ನು ಕೇಳು.

ರಾವಣ—ಹೇಗೆ? ಹೇಗೆ? ರಾಮನಪ್ಪಣೆಯೆಂದುಸಿರುವೆಯಾ? ಆಃ! ಈ ಕಪಿಯನ್ನು ಕೊಲ್ಲಿರಿ.

ವಿಭೀಷಣ—ಮಹಾರಾಜನೆ! ಸೈರಿಸು, ಶಾಂತನಾಗು. ಎಲ್ಲಾ ತಪ್ಪುಗಳಲ್ಲಿಯೂ ದೂತರು ಕೊಲೆಗೆ ತಕ್ಕವರಲ್ಲ. ಅಥವಾ, ರಾಮನ ಮಾತನ್ನು ಕೇಳಿ ಬಳಿಕ ಚಿತ್ತಾನುಸಾರವಾಗಿ ಮಾಡಬಹುದು.

ರಾವಣ—ಎಲಾ ವಾನರ! ಆ ಮನುಷ್ಯನೆಂದುದೇನು?

ಹನೂಮಾನ್—ಎಲೈ! ಕೇಳು—

ಕಂ॥ ಪರ ಶಿವನೊಳೆ ಮುರಿಯಂ ಪಡೆ।
ಯಿರದಿರೆಯುತಿದುರ್ಗಮಂ ರಸಾತಲಮನೆ ಸೇರ್ ॥
ಶರದಿಂದಂ ತನುವೆಲ್ಲಮು।
ನಿರಿಯುತೆ ಯಮಸದ್ಮಕಟ್ಟುವೆಂ ಗಡ ನಿನ್ನಂ ॥ ೧೬ ॥

ಎಂದು.

ರಾವಣ—ಫ್ಥು! ಫ್ಥು!! ಫ್ಥು!!!

ಮ॥ ಸ್ರ॥ ಸಲೆ ದಿವ್ಯಾಸ್ತ್ರಂಗಳಿಂದಂ ಸುರರನಿಬರುಮಂ ಸೋಲಿಸಿರ್ಪೆಂ ನಿತಾಂತಂ।
ನಲವಿಂ ದೈತ್ಯೇಂದ್ರರೆಲ್ಲರ್ ಬಳಿಯೊಳೆ ಬಸಮಾಗಿರ್ದಪರ್ ಮತ್ತೆ ನೋಡ ॥
ಲ್ಕಲಕಾಧೀಶಂ ವಿಶೇಷಂ ಕಳೆಗಳೆದೆಸೆವಂ ಪುಷ್ಪಕಂಗಿತ್ತುಕೊಳ್ಳ।
ಕ್ಕೆಲೆಲೋ ಇಂತಾಗಿರಲ್ಕೆಂತಿದಿರಿಸುವನವಂ ಮಾನುಷಂ ರಾಮನೆನ್ನಂ ॥ ೧೭ ॥

ಹನೂಮಾನ್—ಹೀಗಿದ್ದ ನೀನು ಆವನ ಮಡದಿಯನ್ನು ಮೋಸದಿಂದ ಕದ್ದು ತಂದೆಯೇಕೆ?

ವಿಭೀಷಣ—ಹನುಮಂತನು ಚೆನ್ನಾಗಿ ಹೇಳಿದನು.

ಕಂ॥ ಅಸುರವರಾ ನೀಂ ಬೇಜಾ ।
ಗಿಸಿ ರಾಮನನಂದು ಮಾಯೆಯಿಂದಂ ಮೋಹ್ ಯಾ ॥
ಚಿಸುವವನಾಕೃತಿಯೊಂದುತೆ ।
ರಸೆಯುಣಾಗಿಯನಪಹರಿಸಿದೆಯಲ್ತೇ ಛಲದಿಂ ॥ ೧೮ ॥

ರಾವಣ—ವಿಭೀಷಣಾ! ಏನು? ಹಗೆಯ ಪಕ್ಷವನ್ನು ಸೇರುವೆಯಾ?

ವಿಭೀಷಣ—

ಕಂ॥ ಮನ್ನಿಪುದರಸಾ ಹಿತವಿಾ ।
ಯೆನ್ನಯ ನುಡಿ ರಾಮನರಸಿಯಂ ಬೀಟಿಕ್ಕೊಡು ಕೇ ॥
ಳಿನ್ನಿತ್ತಲ್ ರಾಕ್ಷಸ ವರ ।
ನಿನ್ನಿಂದೀ ಬಂಡಮುಟಿಗುವೆಂಬುದನೆಳಸೆಂ ॥ ೧೯ ॥

ರಾವಣ—ವಿಭೀಷಣಾ! ಸಾಕು, ಅಂಜದಿರು.

ಕಂ॥ ಮಿಗಮೆನಿಪುದು ಕೇಸರಿಯಂ ।
ತಗುಲಿಸಿ ಕೀಟಿಗ್ಗಿಡಪುದೆಂಬುದೆಂತುಟು ಪೇಟಿಾ ॥
ಜಗದೊಳ್ ಮದಿಸಿದ ಗಜಮಂ ।
ಸೃಗಾಲ ಶಾಬಕಮಿದಿರ್ಚಿ ಕೊಲ್ವುದುಮುಂಟೇ ॥ ೨೦ ॥

ಹನೂಮಾನ್—ಆ! ರಾವಣಾ! ಸಿರಿ ತೊಲಗಿದ ನೀನು ರಾಘವನನ್ನು ಕುರಿತು ಹೀಗೆನ್ನುವುದು ತರವೆ? ಬೇಡ ಬೇಡ.

ಕಂ॥ ಕಲಿಗಳ ತಿಲಕನನಾಖಿಂ ।
ಡಲ ಸಮನಂ ಲೋಕನಾಥನಂ ರಾಘವನಂ ॥
ಬಲ ಹೀನಂ ನೀಂ ಪಟಿವುದು ।
ಸಲೆ ಸರಿಯೇ ಖೂಳ ನೀಚ ರಾವಣ ದುರುಳಾ ॥ ೨೦ ॥

ರಾವಣ—ಏನಿದೇನಿದು? ಹೆಸರು ಹಿಡಿದು ಹೇಳುತ್ತಿರುವನು! ಈ ಕೋತಿಯನ್ನು ಕೊಲ್ಲಿರಿ, ಅಥವಾ, ದೂತವಧೆಯು ತರವಲ್ಲ; ಶಂಕುಕರ್ಣಾ! ಬಾಲವನ್ನು ಹೊತ್ತಿಸಿ ಈ ಕೋತಿಯನ್ನು ಓಡಿಸಿಬಿಡಿ.

ಶಂಕುಕರ್ಣ—ಮಹಾರಾಜನಾಜ್ಞೆ. ಹೀಗೆ ಹೀಗೆ—

ರಾವಣ—ಅಥವಾ, ಅವನಿಲ್ಲಿ ಬರಲಿ.

ಹನೂಮಾನ್—ಇದೋ ಬಂದಿರುವೆನು.

ರಾವಣ—ಆ ಮನುಷ್ಯನಿಗೆ ನನ್ನ ಈ ಮಾತುಗಳನ್ನು ಹೇಳು—

ಕಂ॥ ಮಡದಿಯನಪಹರಿಪುದಱಿಂ ।
ದಡಗಿಸಿದೆಂ ನಿನ್ನ ಕೊರ್ವನನಿತಂ ರಾಮಾ ॥
ಪಡೆದಿರ್ದೊಡೆ ಬಿಲ್ಲಳಕಮ ।
ನೊಡನೆಯೆ ಕುಡು ನನಗೆ ಪಿರಿಯ ಬವರಮನೊಂದಂ ॥ ೨೧ ॥

ಹನೂಮಾನ್—ಕೂಡಲೇ ನೋಡುವೆಯಂತೆ; ಕೇಳು—

ಕಂ॥ ಎಲ್ಲೆಡೆಯೊಳ್ ಕೋಡಗವಡೆ ।
ಯುಲ್ಲಸಡಿಂ ಸುತ್ತಿ ಕೋಂಟೆ ಬನಮಾ ಪುರಿಯಿಂ ॥
ತೆಲ್ಲಮನಳಿಸಲ್ ರಾಮಂ ।
ಬಿಲ್ಲಿನ ದನಿಯಿಂದೆಯಲ್ತೆ ಗೆಲ್ಪಂ ನಿನ್ನಂ ॥ ೨೨ ॥

ರಾವಣ—ಆಃ! ಈ ಕಪಿಯನ್ನು ಅಟ್ಟಿಬಿಡಿರಿ.

ರಾಕ್ಷಸರು—ಹೀಗೆ, ಹೀಗೆ. (ರಾಕ್ಷಸರೊಡನೆ ಹನುಮಂತನು ಹೋಗುವನು)

ವಿಭೀಷಣ—ಮಹಾರಾಜನೆ! ಚಿತ್ತವಿಸು. ನಿನ್ನ ಹಿತಕ್ಕಾಗಿ ಹೇಳಬೇಕಾದ ಬಯಕೆಯೊಂದು ನನಗುಂಟು.

ರಾವಣ–ಏನದು? ಹೇಳು. ಆ ಹಿತವನ್ನು ನಾವೂ ಕೇಳಬಯಸುವೆವು.

ವಿಭೀಷಣ—ಎಲ್ಲ ವಿಧದಿಂದಲೂ ರಾಕ್ಷಸಕುಲಕ್ಕೆ ವಿನಾಶವು ಬಂದಿದೆಯೆಂದು ತಿಳಿಯುವೆನು.

ರಾವಣ—ಯಾವ ಕಾರಣದಿಂದ?

ವಿಭೀಷಣ—ಮಹಾರಾಜನ ವಿಪ್ರತಿಪತ್ತಿಯಿಂದ.

ರಾವಣ—ಅದಾವುದಾ ನನ್ನ ವಿಪ್ರತಿಪತ್ತಿಯು?

ವಿಭೀಷಣ—ಸೀತಾಪಹರಣವೇ ಅಲ್ಲವೆ!

ರಾವಣ—ಸೀತಾಪಹರಣದಿಂದ ದೋಷವಾವುದು?

ವಿಭೀಷಣ—ಅಧರ್ಮವೂ,

ರಾವಣ—ಸಮುಚ್ಚಯದಿಂದ ನಿನ್ನ ಮಾತಿನ್ನೂ ಉಳಿದಿರುವುದು; ಅದನ್ನೂ ಹೇಳು.

ವಿಭೀಷಣ—ಅದೇ! ಹೇಳಿದೆನಲ್ಲವೆ?

ರಾವಣ—ವಿಭೀಷಣಾ! ಏಕೆ ಮರೆಮಾಚುವೆ? ದಿಟವನ್ನು ಹೇಳದಿರುವೆಯಾದರೆ ನನ್ನ ಜೀವದ ಮೇಲಾಣೆ.

ವಿಭೀಷಣ—ಮಹಾರಾಜನು ಅಭಯವನ್ನು ಕೊಡಬೇಕು.

ರಾವಣ—ಅಭಯವನ್ನು ಕೊಟ್ಟಿರುವೆನು, ಹೇಳು.

ವಿಭೀಷಣ—ಬಲವದ್ವಿಗ್ರಹವೂ

ರಾವಣ—ಹೇಗೆ ಹೇಗೆ? ಬಲವದ್ವಿಗ್ರಹವೆ?

ಕಂ॥ ಅರರೇ ಈಯಬಿ°ರಕ್ಕಸ ।
ನಿರವೆನ್ನಯ ಶತ್ರು ಪಕ್ಷಮಂ ಸೇರ್ದಿನಗಂ ॥
ನೆರೆ ಕೋಪಮನುರು ಜವದಿಂ
ಬರಿಸಿಂತುಟು ಧೈರ್ಯವಾಗಿ ಗಳಹುತ್ತಿರ್ಪಂ ॥ ೨೪ ॥

ಯಾರಲ್ಲಿ?

ಕಂ॥ ಒಡವುಟ್ಟಿದ ನಂಟಿಂ ಗಡ।
ಕಡೆ ಗಣ್ಗೆ ವಿರೋಧಿಯೊಡನೆ ಸೇರ್ದಿವಸೊಳ್ ಕ॥
ಣ್ಗಡೆಯಿರಿಸೆಂ ನಾನದಱಿಂ।
ತಡೆಯದೆ ಪೊರಡಿಸುಗೆಯಿವನನೀ ಬಳಿಯಿಂದಂ ॥ ೨೫ ॥

ವಿಭೀಷಣ—ಮಹಾರಾಜನೆ! ತಾಳ್ಮೆಯೊಂದು, ಪ್ರಸನ್ನನಾಗು; ನಾನೇ ಹೊರಟುಹೋಗುವೆನು.

ಕಂ॥ ಅರಸನೆ ನೀಂ ಬೆಸಸಿದೆಯಲೆ।
ಪೊರಮಡುವೆಂ ಕೇಳ ದೋಷಿಯಲ್ತಾಂ ನೀನಿಂ॥
ತೊರೆಯುತೆ ಮುಳಿಸಾಸೆಗಳಂ।
ನಿರವಿಸು ಮನಕೊಪ್ಪಿದಂತೆ ಕಾರ್ಯ ಕ್ರಮಮಂ ॥ ೨೬ ॥

(ಹೊರಟು ಬಂದು) ನಾಸ್ತಿಗಲೇ—

ಉ॥ ತಾವರೆಗಣ್ಣನಂ ಪರಮಭೀಕರ ಚಾಪನನಾಶ್ರಿತರ್ಗೆ ಸೈ।
ತಾವಗಮಿಷ್ಟಮಂ ನೆರಪುವುಜ್ಜುಗದಿಂದಲೆ ಕೀರ್ತಿವೆತ್ತನಂ॥
ರಾವಣನಂ ಕೊಲಲ್ಕೆ ಮನದಂದನನಾ ನರ ರೂಪ ರಾಮನಂ।
ಸೇವಿಸಿ ಕಾಪನೊಂದಿಯಟವೀ ಖಳ ವಂಶಮನುದ್ಧರಿಪ್ಪೆನಾಂ ॥ ೨೭ ॥

(ಎಂದು ತೆರಳುವನು)

ರಾವಣ—ಆಹ! ವಿಭೀಷಣನು ಹೊರಟುಹೋದನು. ನಾನಿನ್ನು ನಗರರಕ್ಷಣೆಯನ್ನು ಮಾಡಿಸುವೆನು. (ಎಂದು ತೆರಳುವನು)

ಚತುರ್ಥಾಂಕ

[ಆಮೇಲೆ ವಾನರ ಕಂಚುಕಿಯು ಬರುವನು]

ಕಂಚುಕಿ—ಎಲೈ ಸೇನಾಧಿಪತಿಯೆ! ವಾನರ ಸೇನೆಗೆ ಸನ್ನಾಹವಾಗಿರುವಂತೆ ಅಪ್ಪಣೆಮಾಡು.

ಸೇನಾಪತಿ—(ಪ್ರವೇಶಿಸಿ) ಆರ್ಯನೆ! ಈ ಸನ್ನಾಹ ಕಾರ್ಯವು ಯಾವುದರ ಸಲವಾಗಿ?

ಕಂಚುಕಿ—ಈಗಲೇ ನಮ್ಮ ಹನುಮಂತನು ಆರ್ಯ ರಾಮನ ಸತಿಯಾದ ಸೀತಾದೇವಿಯ ಸಮಾಚಾರವನ್ನು ತಂದಿರುವನಷ್ಟೆ!

ಸೇನಾಪತಿ—ಹೇಗೆ ಹೇಗೆ?

ಕಂಚುಕಿ—ಆಲಿಸು—

ಚಂ॥ ಅರವಳಿಯಂ ಬಿಸುಟ್ಟು ದಶಕಂಧರನಿಂ ಬಹು ಬಾಧೆದಾಳ್ದು ಮೇಣ್ ।
ಕೊರಗುತಮೇಗಳುಂ ನೃಪತಿಯಾತ್ಮಜೆ ಲಂಕೆಯೊಳಿರ್ಪಳತ್ತ ಆ ॥
ಪರಿಯನೆ ಕೇಳುತುಂ ಮರುಗುವಾ ರಘುರಾಮನ ಕಜ್ಜಕಾಗಿಯೆ ।
ವ್ಮರಸನುಸಿರ್ದಪಂ ಭರದೆ ಸಜ್ಜುಗೆಯಲ್ಕರಿ ಭೀಕರಮೆಮ್ಮ ಸೈನ್ಯಮಂ ॥೧॥

ಸೇನಾಪತಿ—ಓಹೋ! ಹೀಗೆಯೊ! ಮಹಾರಾಜನಪ್ಪಣೆಯಂತೆಯೇ ಆಗಲಿ.

ಕಂಚುಕಿ—ವಾನರ ಸೇನೆಯು ಸಿದ್ಧವಾಗಿರುವುದೆಂದು ಮಹಾರಾಜನಿಗೆ ಅರಿಕೆ ಮಾಡಲು ನಾನೂ ಹೋಗುವೆನು. (ಹೋಗುವನು)

[ಇದು ವಿಷ್ಕಂಭಕವು]

[ಆಮೇಲೆ ರಾಮ ಲಕ್ಷ್ಮಣ ಸುಗ್ರೀವ ಹನುಮಂತರು ಪ್ರವೇಶಿಸುವರು]

ರಾಮ—

ಮ॥ ಸ್ರ॥ ಬಳಸಿರ್ದಾ ಸಾನು ಕುಂಜಂ ವಿಪಿನ ತತಿ ಯುತಂ ಮೇಘ ಸಾಮ್ಯಂ
ಮಹೀಧ್ರಂ ।
ಗಳುವಂ ಸಿಂಹಂ ತರಕ್ಷು ದ್ವಿಪ ತತಿ ಸವಿದಂಬಿಂ ಕರಂ ತೋರ್ಪ ಪೂರ್ಠಂ ॥
ಗಳುವಂ ಪೂಗಾಯ್ಗಳಿಂದಂ ಮೆರೆವ ಮರಗಳಿಂ ರಮ್ಯಮಾಗಿರ್ಪರಣ್ಯಂ ।
ಗಳುವಂ ದಾಂಟುತ್ತೆ ಬಂದೆಂ ಕಪಿಪನ ಪಡೆಗೂಡಾಂ ಕಡಲ್ತೀರಕೀಗಳ್ ॥೨॥

ಲಕ್ಷ್ಮಣ— ಇವನು ಈ ಭಗವಂತನಾದ ವರುಣನು—

ಮ॥ ಜಲಯುಕ್ತಾಭ್ರದವೋಲ್ ವಿನೀಲ ಮಣಿವೊಲ್ ತೋರ್ದಪ್ಪ ನೀರಂ ಕರಂ ।
ಲಲಿತಂ ಫೇನ ತರಂಗ ಚಾರು ಸುಮನೋಹಾರಂ ಸಮಂತಚ್ಚಿತ್ತಿಯಿಂ ॥
ನಲಿದೆಯ್ತುರ್ಪ ನದೀ ಸಹಸ್ರ ಕರನೀ ಸ್ರೋತಸ್ವಿನೀ ವಲ್ಲಭಂ ।
ಸಲೆ ಸಂಕಾಶಿಸುತಿರ್ದಪಂ ಪವಡಿಸಿರ್ಪಾ ಶ್ರೀವರಂಬೋಲ್ ವಲಂ ॥೩॥

ರಾಮ—ಹೇಗೆ? ಹೇಗೆನ್ನುತ್ತಿರುವೆ?

ಕಂ॥ ಪಗೆಯಂ ಕೊಲ್ಲಲ್ಕೆಯೆ ಈ ।
ಪಗೆ ಕಣೆಯಂ ಕೆಯ್ಕೊಳಾಂತು ನಿಂದಿರ್ಪೆನ್ನಂ ॥
ಪುಗಲಿಸದೆಯುಮಲ್ಲದವಂ ।
ಮಿಗೆ ಬರ್ದುಕಿರ್ಪಂತೆಯುಂ ನಿರೋಧಿಪುದು ಕಡಲ್ ॥೪॥

ಸುಗ್ರೀವ—ಓಹೊ! ಆಗಸದಲ್ಲಿ—

ಕಂ॥ ನೀರಾಂತ ಮುಗಿಲ ವರ್ಣಂ ।
ದೋರುತೆ ಸಲೆ ಮಿಸುನಿಯೊಡವೆದಳೆ ದಿರ್ಪೊಡಲಿಂ ॥
ದೀ ರಕ್ಕಸನಾವೆಡೆಯಿಂ ।
ಸಾರುವನುರಿಗೆಳಸಿ ಬರ್ಪ ಶಲಭನ ತೆರದಿಂ ॥೫॥

ಹನೂಮಾನ್—ಓಹೊ! ವಾನರ ವೀರರಿರಾ! ನೀವೆಲ್ಲರೂ ಜಾಗರೂಕತೆಯಿಂದಿರಬೇಕು.

ಕಂ॥ ಗಿರಿ ತರು ಪಿಡಿ ಪಲ್ ನಖವುಡಿ ।
ಯುರು ನಾದನಿವರ್ಕ್ಕಳೀದೆಯಿಾ ರಕ್ಕಸನಂ ॥
ಹರಿಸುಗೆ ಮೊನೆಯೊಳ್ ಮೇಣ್ ವಾ ।
ನರಪತಿಗಳ್ ಪೊರೆಗುಗೆಮ್ಮ ಮನುಜಾಧಿಪನಂ ॥ ೬ ॥

ರಾಮ—ರಕ್ಕಸನೆ! ಹನೂಮಾನ್! ಸಾಕು ಸಾಕು? ತ್ವರೆಪಡದಿರು.

ಹನೂಮಾನ್—ದೇವಾ! ಅಪ್ಪಣೆ.

[ಬಳಿಕ ವಿಭೀಷಣನು ಬರುವನು]

ವಿಭೀಷಣ—ಓಹೊ! ರಾಘವನ ಶಿಬಿರದ ಬಳಿಗೆ ಬಂದವನಾದೆನು. (ಚಿಂತಿಸಿ) ದೂತನನ್ನು ಕಳುಹಿಸಿ, ಬರುವಿಕೆಯನ್ನು ತಿಳಿಯಿಸದಿರುವ ಹಗೆಯ ಕಡೆಯವನಾದ ನನ್ನನ್ನು ರಾಘವನು ಹೇಗೆ ತಿಳಿದುಕೊಳ್ಳು ವನೊ? ಏಕೆಂದರೆ—

ಉ॥ ಕೋಪಮನೊಂದಿದಾವನಿದಿರೊಳ್ ಮೊನೆಗೆಂದು ನಿಲಲ್ ನಿಳಿಂಪರಿಂ ।
ವ್ಯಾಪಿಸಿ ಬಂದ ವಜ್ರಯುಮುಶಕ್ತನೊ ಆ ಸುರವೈರಿಯಾನುಜಂ ॥
ಕಾಪನಪೇಕ್ಷಿಸೀಗಳಿರದೆಯ್ದಿದನೆಂದೊಡೆ ರಾಮನೆನ್ನನಿ ।
ನ್ನೇಪರಿಯಿಂವೆ ಭಾವಿಪನೊ ಎಂದೆನುತೆನ್ನೆರ್ದೆ ತಾಂ ಮಿಡುಂಕುಗುಂ॥ ೭॥

ಅಥವಾ—

ಕಂ॥ ಆರದೊಳ್ ನೇರಿದನುಂ ಶರ ।
ಣರೊಳೆರಕಂಗೂಡಿದಾತನುಂ ಸಜ್ಜನನುಂ ॥
ಸರಿಯೆನಿಸಿದ ರಘುವರನಂ ।
ಹರಿಕಿಪೆನೆಂತುಟು ವಿಶುದ್ಧಮನನಾಸೀಗಳ್ ॥ ೮ ॥

(ಕೆಳಗೆ ನೋಡಿ) ಓಹೊ! ಇದೇ ರಘುಕುಲಪ್ರವರನಾದ ರಾಮನ ಶಿಬಿರವು; ಇಲ್ಲಿ ಇಳಿಯುವೆನು. (ಇಳಿದು) ಸರಿ, ಇಲ್ಲಿಯೇ ಇದ್ದುಕೊಂಡು ನನ್ನ ಬರುವಿಕೆಯನ್ನು ಸ್ವಾಮಿಗೆ ತಿಳಿಯಿಸುವೆನು.

ಹನೂಮಾನ್—(ಮೇಲೆ ನೋಡಿ) ಓಹೊ! ಇದೇನಿದು! ಪೂಜ್ಯನಾದ ವಿಭೀಷಣನು!

ವಿಭೀಷಣ—ಓಹೊ! ಹನೂಮಂತನು. ಹನೂಮಾನ್! ನಾನು ಬಂದಿರುವುದನ್ನು ಸ್ವಾಮಿಗೆ ಅರಿಕೆಮಾಡು.

ಹನೂಮಾನ್—ಸರಿ, ಆಗಲಿ (ರಾಮನ ಬಳಿಗೆ ಹೋಗಿ) ಆರ್ಯನಿಗೆ ಜಯವಾಗಲಿ.

ಕಂ॥ ಒಡೆಯನೆ ಕೇಳ್ ನಿನಗಾಗಿಯೆ।
ಒಡವುಟ್ಟಿದನಿಂದೆ ಕಡೆಯನೆಣಿಸೀಯುಜವಾಂ ॥
ತೊಡಲಂ ವಿಭೀಷಣಂ ನಿ।
ನ್ನಡಿಮರೆಯಂ ಬೇಡೆ ಬಂದು ಬಾಗಿಲೊಳಿರ್ಪಂ ॥ ೯ ॥

ರಾಮ—ಏನು! ಮರೆಯನ್ನು ಬೇಡಲು ಬಂದಿರುವನೆ? ವತ್ಸ! ಲಕ್ಷ್ಮಣ! ಹೋಗು, ಉಪಚರಿಸಿ ವಿಭೀಷಣನನ್ನು ಒಳಪುಗಿಸು.

ಲಕ್ಷ್ಮಣ—ಆರ್ಯನಾಜ್ಞೆ.

ರಾಮ—ಸುಗ್ರೀವ! ಏನೋ ಹೇಳಲು ಬಯಸುವವನಂತೆ ತೋರುತ್ತಿರುವೆ.

ಸುಗ್ರೀವ—ದೇವ! ರಾಕ್ಷಸರು ಮಾಯಾವಿಗಳು; ಕಪಟಯುದ್ಧವನ್ನು ಮಾಡುವವರು. ಆದಕಾರಣ ಚೆನ್ನಾಗಿ ತಿಳಿದು ವಿಭೀಷಣನನ್ನು ಇಲ್ಲಿಗೆ ಬರಮಾಡಿಸಬೇಕು.

ಹನೂಮಾನ್—ಮಹಾರಾಜನೆ! ಹಾಗಲ್ಲ.

ಉ॥ ದೇವನೊಳಾವದೆಂತು ಪದಕಿಂಕರರಾಗಿಯೆ ಬಾಳ್ವೆವೋ ಸಮಂ।
ತಾವಗವಿಾ ವಿಭೀಷಣನುಮೆಂದುರೆ ಭಾವಿಪೆನೇಕೆನಲ್ಕೆ ಪಿಂ॥
ದಾವೊಡವುಟ್ಟಿದಣ್ಣನೊಳಿವಂ ಮಿಗೆ ವಾದಿಸುತಿರ್ದುದಂ ಕರಂ।
ರಾವಣ ರಾಜಧಾನಿಯೊಳೆ ಎನ್ನಯ ಕಣ್ಗಳಿನೀಕ್ಷಿಸಿರ್ದಪೆಂ ॥ ೧೦ ॥

ರಾಮ—ಸರಿ. ಹಾಗಾದರೆ ಹೋಗು; ವಿಭೀಷಣನನ್ನು ಉಪಚರಿಸಿ ಕರೆದುಕೊಂಡು ಬಾ.

ಲಕ್ಷ್ಮಣ—ಆರ್ಯನಾಜ್ಞೆ. (ನಡೆದು ಬಂದು) ಓಹೊ ವಿಭೀಷಣನು! ವಿಭೀಷಣ! ಕ್ಷೇಮವೆ?

ವಿಭೀಷಣ—ಓಹೊ ಕುಮಾರ ಲಕ್ಷ್ಮಣನು! ಕುಮಾರ! ಈಗ ಕ್ಷೇಮಿಯಾದೆನು.

ಲಕ್ಷ್ಮಣ—ವಿಭೀಷಣ! ಆರ್ಯನ ಬಳಿಗೆ ತೆರಳುವೆವು.

ವಿಭೀಷಣ—ಸರಿ (ತೆರಳುವರು)

ಲಕ್ಷ್ಮಣ—ಆರ್ಯನಿಗೆ ಜಯವಾಗಲಿ.

ವಿಭೀಷಣ—ಪೂಜ್ಯನು ಪ್ರಸನ್ನನಾಗಲಿ, ಸ್ವಾಮಿಯು ವಿಜಯನಾಗಲಿ.

ರಾಮ—ಓಹೊ ವಿಭೀಷಣನು! ವಿಭೀಷಣ, ಕುಶಲವಷ್ಟೆ!

ವಿಭೀಷಣ—ದೇವ! ಈಗ ಕುಶಲಿಯಾದೆನು.

ಕಂ॥ ಅರವಿಂದೇಕ್ಷಣನುಂ ಶರ।
ಣರನುರೆ ಪಾಲಿಪನುಮೆನಿಪ ನಿನ್ನಯ ಪಾರ್ಶ್ವ೦॥
ದರಸಾ ಲಾಲಿಸು ಕಲ್ಮಷ।
ವಿರಹಿತನುಂ ಕುಶಲಿಯುಂ ಕಣಾ ನಾನೀಗಳ್ ॥ ೧೧ ॥

ರಾಮ—ಇಂದು ಮೊದಲು ನನ್ನ ಮಾತಿನಿಂದ ನೀನು ಲಂಕೇಶ್ವರನಾಗು.

ವಿಭೀಷಣ—ಅನುಗೃಹೀತನಾದೆನು.

ರಾಮ—ವಿಭೀಷಣ! ನಿನ್ನ ಬರುವಿಕೆಯಿಂದಲೇ ನಮ್ಮ ಕೆಲಸವು ಕೈಗೂಡಿತು. ಈಗ ಕಡಲನ್ನು ದಾಟುವುದಕ್ಕೆ ಉಪಾಯವಾವುದೆಂಬುದು ತಿಳಿಯದಿರುವುದಲ್ಲ.

ವಿಭೀಷಣ—ದೇವ! ಇಲ್ಲಿ ತಿಳಿಯಬೇಕಾದುದಾವುದು? ದಾರಿಯನ್ನು ಕೊಡದಿದ್ದರೆ ಆರ್ಯನು ಸಾಗರನ ಮೇಲೆ ದಿವ್ಯಾಸ್ತ್ರವನ್ನು ಬಿಡಬಹುದಲ್ಲವೆ?

ರಾಮ—ಸಾಧು ಸಾಧು! ವಿಭೀಷಣ! ಆಗಲಿ, ಹಾಗೆಯೇ ಮಾಡುವೆನು.

[ಎಂದು ಥಟ್ಟನೆದ್ದು, ಸಿಟ್ಟಿನಿಂದ]

ಕಂ॥ ಬಳಿಗುಡದಿರಲೆನಗೆ ಕಡಲ್ ।
ಜಳಮಂ ಕಣೆಯಿಂದೆ ಕುಡಿಯಿಸೊಣಗಿಸಿ ಕೆಸರಂ ॥
ಜಳಚರಮಂ ತವಿಸುತ್ತಲೆ ।
ಗಳ ದನಿ ಸಲೆಯುಣಗುವಂತೆ ಬೇಗನೆ ಮಾಳ್ಪೆಂ ॥ ೧೩ ॥

ವರುಣ—(ಪ್ರವೇಶಿಸಿ, ಸಂಭ್ರಮದಿಂದ)

ವೃ॥ ತಾರಗೆವಟ್ಟಿನಾಡುಗರ ಕಜ್ಜಳಿ ಮಾನವ ರೂಪನಾಂತ ಪಂ।
ಕೇರುಹನಾಭನಲ್ಲಿಯಪರಾಧಮನಾಗಿಸಿಯಾಗಳಾತನಾ ॥
ಕೂರಿದ ನಿರ್ಜರಾರಿ ಹರ ಬಾಣದೆ ಭೀತಿಯನೊಂದಿದೆಂ ದಲಿ ।
ನ್ನಾ ರಘುವಂಶ ದೀಪನಡಿದಾವರೆಯೇ ಮರೆ ಪೋಪೆನಲ್ಲಿಗಾಂ ॥ ೧೪ ॥

(ನೋಡಿ) ಓಹೋ ಭಗವಂತನು! ಇವನು—

ಕಂ॥ ಧೃತ ಶಾರ್ಙ್ಗ ಗದಾ ಚಕ್ರಂ ।
ಕ್ಷಿತಿಗೆಲ್ಲಂ ತಾನೆ ಕಾರಣನೆನುತ್ತಿರಲುಂ ॥
ಪತಿಕರಿಸುತೆ ಮಾನವನಾ ।
ಕೃತಿಯಂ ಕಾರ್ಯಾರ್ಥಮಾಗಿ ಬಂದಿರ್ಪನಲೇ ॥ ೧೫ ॥

Funding: IKS/Tattva Heritage. Digitization: Sarayu Trust/eGangotri

ತ್ರೈಲೋಕ್ಯಕಾರಣನೂ ಭಗವಂತನೂ ಎನಿಸಿದ ನಾರಾಯಣನಿಗೆ ನಮಸ್ಕರಿಸುವೆನು.

ಲಕ್ಷ್ಮಣ—(ನೋಡಿ) ಆಃ! ಇವನಾರು?

ಮ॥ ಮಣಿಯಿಂದೊಪ್ಪುವ ಮೌಳಿಯಿಂ ಮಿನುಗುತುಂ ಕೆಂಪಾಂತ ಪೆರ್ಗಣ್ಗಳಿಂ ।
ದೆಣಿಸಲ್ಕೈದಿಲ ನೀಲ ವರ್ಣ ರುಚಿಯಿಂ ಮತ್ತೇಭ ಸಲ್ಲೀಲೆಯಿಂ ॥
ದಣಿಯಾಂತೀ ಜಲರಾಶಿ ಮಧ್ಯದೊಳಗಿಂದೆಳ್ತಂದಪಂ ಬೇಗದಿಂ ।
ಚಣದೊಳ್ ತೇಜದೆ ಜೀವ ಲೋಕಮನಿದೇಂ ತಳ್ಗಿಪ್ಪವೋಲ್
ಗೆಯ್ದಪಂ ॥ ೧೫ ॥

ವಿಭೀಷಣ—ದೇವ, ಇದೊ! ಈತನೆ ಭಗವಂತನಾದ ವರುಣನು.

ರಾಮ—ಏನು? ಈತನು ವರುಣನೆ? ಭಗವನ್, ವರುಣ! ನಿನಗೆ ನಮಸ್ಕಾರವು.

ವರುಣ—ದೇವೇಶನು ನನಗೆ ನಮಸ್ಕಾರವನ್ನು ಮಾಡುವುದು ಸರಿಯಲ್ಲ. ಅಥವಾ—

ಕಂ॥ ಅರಗುವರ ಮಾನಿಸಿದೇಕ್ಕೈ ।
ಸರಿ ಸಮನೇಂ ಪೇಳ ನಿನಗೆ ರೋಷದೊಳಾನಿಂ ॥
ನರವರ ಬೇಗನೆ ಸೊಲ್ಲಿವು ।
ದಿರದೀಗಳ್ ಗೆಯ್ಯಲಿರ್ಪ ಕಜ್ಜಮಿದೆನುತುಂ ॥ ೧೬ ॥

ರಾಮ—ಲಂಕೆಗೆ ಹೋಗಲು ಪೂಜ್ಯನು ದಾರಿಯನ್ನು ತೋರಿಸಿ ಕೊಡಬೇಕು.

ವರುಣ—ಇದೋ ದಾರಿಯು, ನೀನು ತೆರಳಬಹುದು. (ಮಾಯವಾಗುವನು)

ರಾಮ—ಏನಿದು! ಭಗವಂತನಾದ ವರುಣನು ಕಣ್ಮರೆಯಾದನು. ವಿಭೀಷಣ! ಭಗವತ್ಪ್ರಸಾದದಿಂದ ಸಲಿಲಾಧಿಪನು ಅಲುಗದಿರುವುದನ್ನು ನೋಡು!

ವಿಭೀಷಣ—ದೇವ! ಜಲನಿಧಿಯು ಈಗ ಎರಡು ಭಾಗವಾದಂತೆ ಕಾಣಿಸುತ್ತಿರುವುದು.

ರಾಮ—ಹನೂಮಂತನೆಲ್ಲಿ?

ಹನೂಮಾನ್—ಸ್ವಾಮಿಗೆ ವಿಜಯವಾಗಲಿ!

ರಾಮ—ಹನೂಮಾನ್! ಮುಂದೆ ನಡೆ.

ಹನೂಮಾನ್—ಸ್ವಾಮಿಯಾಜ್ಞೆ! (ಎಲ್ಲರೂ ನಡೆದು ಬರುತ್ತ)

ರಾಮ—(ನೋಡಿ, ವಿಸ್ಮಯದಿಂದ) ವತ್ಸ ಲಕ್ಷ್ಮಣ! ವಯಸ್ಯ ವಿಭೀಷಣ! ಮಹಾರಾಜ ಸುಗ್ರೀವ! ಸಖೇ ಹನೂಮಾನ್! ನೋಡಿ ನೋಡಿ! ಆಃ ಆಶ್ಚರ್ಯವು ಸಾಗರದ ಚೆಲ್ವು! ಇಲ್ಲಿಯಾದರೋ—

ಚಂ॥ ಕೆಲವೆಡೆ ಫೇನದುರ್ಬು ಕೆಲದಾಣದೊಳೆಯ್ದೆ ಝುಷಾಕುಲಾಂಬು ಮೇಣ್।
ಕೆಲದಳದಲ್ಲಿ ಶಂಖ ತತಿ ಕರ್ಮುಗಿಲಂತೆವೊಲೀ ಪ್ರದೇಶವಿಂ॥
ತಲೆಗಳ ಮಾಲೆಯೊರ್ದೆಸೆ ನೆಗಳ್ಗಳ ಭೀತಿಯುದೊಂದು ಠಾವಿನೊಳ್।
ಪುಲಿ ಸುಳಿ ಸಾಲ್ಗಳೊರ್ಕಡೆಯುಲುಂಗದ ವಾರಿದಲೊಂದು ಭಾಗದೊಳ್॥೧೭॥

ಭಗವತ್ಪ್ರಸಾದದಿಂದ ಸಮುದ್ರವನ್ನು ದಾಂಟಿದೆವು.

ಹನೂಮಾನ್—ದೇವ ಇದೊ! ಇದೇ ಲಂಕೆಯು.

ರಾಮ—(ಹೆಚ್ಚು ಹೊತ್ತು ನೋಡಿ) ಅಯ್ಯೋ! ರಕ್ಕಸರೂರ ಸಿರಿಯು ಬೇಗನೆ ಹಾಳಾಗುತ್ತದೆಯಲ್ಲ!

ಕಂ॥ ತೊಡುವೆನ್ನ ಶರಾನಿಲನಿಂ।
ದೊಡೆದುಂ ಕಪಿ ಸೈನ್ಯ ವೀಚಿಯಿಂದಂಡಲೆದುಂ॥
ಷಡ ರಾವಣ ನಾವಿಕನಿಂ।
ಬಿಡದೆ ಮುಳುಂಗುವುದು ಕಡಲ ಹಡಗಿನ ತೆರದಿಂ ॥೧೮॥

ಸುಗ್ರೀವ! ಈ ಸುವೇಲ ಪರ್ವತದಲ್ಲಿ ಸೇನಾನಿವೇಶವನ್ನು ಮಾಡಿಸು. (ಕುಳಿತುಕೊಳ್ಳುವನು)

ಸುಗ್ರೀವ—ಸ್ವಾಮಿಯಪ್ಪಣೆಯಂತೆಯೆ. ನೀಲ? ಹೀಗೆ ಮಾಡು.

ನೀಲ—ಮಹಾರಾಜನಾಜ್ಞೆ! (ಹೋಗಿ, ಬಂದು) ಜೀಯ! ಲಾಲಿಪುದು: ಸರಿಯಾಗಿ ಬಂದು ನಿಂತ ಸೇನೆಯಲ್ಲಿ, ಗುಂಪು ಗುಂಪಾಗಿ ಪರೀಕ್ಷಿಸು ತ್ತಿರುವಲ್ಲಿ, ಯಾವುದೊಂದು ಪುಸ್ತಕದಲ್ಲಿಯೂ ಗುರುತಿಸದಿರುವ ಇಬ್ಬರು ವಾನರರು ಸಿಕ್ಕಿರುವರು. ಈಗ ಮಾಡತಕ್ಕುದೇನೆಂಬುದನ್ನು ನಾವರಿ ಯೆವು. ಈ ವಿಷಯದಲ್ಲಿ ಸ್ವಾಮಿಯೇ ಆಜ್ಞಾಪಿಸಬೇಕು.

ರಾಮ—ಅವರಿರ್ವರನ್ನೂ ಬೇಗನೆ ಬರಮಾಡು.

ನೀಲ—ಸ್ವಾಮಿಯಾಜ್ಞೆ! (ಹೋಗುವನು)

[ಬಳಿಕ ನೀಲನು ವಾನರ ರೂಪಿಗಳಾದ ಶುಕ ಸಾರಣರನ್ನು ಹಿಡಿದುಕೊಂಡಿರುವ ವಾನರರೊಡನೆ ಬರುವನು.]

ವಾನರರು—ಎಲವೋ! ಹೇಳಿರಿ, ನೀವಿಬ್ಬರೂ ಯಾರು ಹೇಳಿರಿ.

ಇಬ್ಬರೂ—ಜೀಯ! ನಾವಿಬ್ಬರೂ ಆರ್ಯ ಕುಮುದಕನ ಸೇವಕರು.

ವಾನರರು—ಜೀಯ! ಆರ್ಯ ಕುಮುದಕನ ಸೇವಕರೆಂದು ತಮ್ಮನ್ನು ಮರೆಮಾಚಿಕೊಳ್ಳುವರು.

ವಿಭೀಷಣ—(ನಿಧಾನವಾಗಿ ಶುಕ ಸಾರಣರನ್ನು ನೋಡಿ)

ಕಂ॥ ಇವರಲ್ತೆಮ್ಮಯ ಪಡೆವಳ ।
ರಿವರಲ್ತು ವನೌಕಸರ್ಕಳುಂ ರಾವಣನಿಂ ॥
ಕವೆ ಚೋದಿತರಾಗೈತಂ ।
ದವರಾ ಶುಕ ಸಾರಣರ್ಕಳೆಂಬುವರಸುರರ್ ॥ ೧೯ ॥

ಇಬ್ಬರೂ—(ಒಳಗೆ) ಅಯ್ಯೋ! ಕುಮಾರನಿಂದ ನಮ್ಮ ಗುರುತು ಬಯಲಾಯಿತು. (ಹೊರಗೆ) ಆರ್ಯ! ನಾವಾದರೋ ರಾಕ್ಷಸರಾಜನ

ವಿಪ್ರತಿಪತ್ತಿಯಿಂದ ನಾಶವಾಗುವ ರಾಕ್ಷಸಕುಲವನ್ನು ಕಂಡು ಆಶ್ರಯ ವೆಲ್ಲಿಯೂ ಸಿಕ್ಕದಿರಲು ಆರ್ಯನನ್ನು ಸೇರಬೇಕೆಂದು ವಾನರ ರೂಪದಿಂದ ಬಂದೆವು.

ರಾಮ—ವಯಸ್ಯ ವಿಭೀಷಣ! ನೀನು ಹೇಗೆ ತಿಳಿಯುವೆ?

ವಿಭೀಷಣ—ದೇವ!

ಕಂ॥ ಇವರಾ ರಕ್ಕಸರಾಯಂ।
ಗೆ ವಿಶೇಷ ಹಿತರ್ ಸಮಂತು ಮಂತುಗಳರಸಾ॥
ಬುವಿಯೊಳಸು ಪೋಪಳಲ್ ಸಂ।
ಭವಿಸಿದೊಡಂ ಲಂಕೆಯುರಸನಂ ಬಿಟ್ಟುಳಿಯರ್ ॥ ೨೦ ॥

ಆದಕಾರಣ ಯೋಗ್ಯವಾದ ದಂಡನೆಯನ್ನು ಸ್ವಾಮಿಯು ವಿಧಿಸಬೇಕು.

ರಾಮ—ವಿಭೀಷಣ! ಹಾಗಲ್ಲ.

ಕಂ॥ ಇವರಂ ದಂಡಿಪುದರಿನೆನ।
ಗೆ ವಲಂ ಪೆರ್ಮೆಗೆ ನೆಗಳ್ವುದಿಲ್ಲಂ ಮೇಣ್ ದಾ॥
ನವ ಪತಿಗೆ ಕುಂದುಮಿಲ್ಲಂ।
ಪವಣಿಂತದರಿಂದೆ ಪೋಕೆ ಬಿಡಿರಿರ್ಪರುಮಂ ॥ ೨೧ ॥

ಲಕ್ಷ್ಮಣ—ಬಿಟ್ಟುಬಿಡುವುದೇ ಆದರೆ ಶಿಬಿರವನ್ನೆಲ್ಲ ಹೊಕ್ಕು ಪರೀ ಕ್ಷಿಸಿ, ಆಮೇಲೆ ಬಿಡುಗಡೆಗೆ ಆರ್ಯನು ಆಜ್ಞಾಪಿಸಬೇಕು.

ರಾಮ—ಲಕ್ಷ್ಮಣನು ಹೇಳಿದುದು ಉಚಿತವಾಗಿರುವುದು. ನೀಲ! ಹೀಗೆ ಮಾಡಬಹುದು.

ನೀಲ—ಸ್ವಾಮಿಯಾಜ್ಞೆ! (ಎಂದು ಅವರನ್ನು ಹೊರಡಿಸುವನು)

ರಾಮ—ಅಥವಾ, ಅವರಿಲ್ಲಿ ಬರಲಿ.

ಇರ್ವರೂ—ಇದೊ! ಬಂದಿರುವೆವು.

ರಾಮ—ಆ ರಾಕ್ಷಸೇಂದ್ರನಿಗೆ ಈ ನನ್ನ ಮಾತನ್ನು ಹೇಳು:

ಕಂ॥ ಮಡದಿಯನೆನ್ನವಳಂ ನೀಂ ।
ಮಿಡುಕದೆಯಪಹರಿಸಿ ಜಗಳವುಂ ಕೊಂಡುದರಿಂ ॥
ಪೊಡನೆ ರಣಾತಿಥಿಯಾಗೀ ।
ಕಡೆಗೈದಿದೆನಲ್ಲದಲ್ತು ನಿನ್ನಂ ನೋಡಲ್ ॥ ೨೨ ॥

ಎಂದು.

ಇರ್ವರೂ—ಸ್ವಾಮಿಯಾಜ್ಞೆ! (ಹೋಗುವರು)

ರಾಮ—ವಿಭೀಷಣ! ನಾವೂ ಸಹ ಸೈನ್ಯವನ್ನು ಪರೀಕ್ಷಿಸುವ.

ವಿಭೀಷಣ—ಸ್ವಾಮಿಯಾಜ್ಞೆ!

ರಾಮ—(ನಡೆದು, ನೋಡಿ) ಓಹೊ! ಸೂರ್ಯನು ಮುಳುಗುತ್ತಿರುವನು. ಈಗಲಾದರೊ—

ಚಂ॥ ಪಡುವುಲೆ ಕೋಡನೇರಿ ನಿಜ ರಶ್ಮಿಗಳಿಂದೆ ಕಡಂಗಿ ಸಂಜೆಯಿಂ ।
ಕಡುಚೆಲುವಾಂತ ಮೆಯ್ಯ್ಮನುರೆ ಮಿಂಚುತಲಿರ್ದಪನಲ್ತೆ ಭಾನು ಕೆಂ ॥
ಪಡಸಿದ ಬಟ್ಟೆಯಂ ಪೊದಿಸಿದಾನೆಯ ಕುಂಭದೊಳಂದಕಾಗಿಯೆಂ ॥
ದಿಷೆ ವರ ಹೇಮದಿಂದೆ ಸಮೆದಿರ್ಪ ಸುರಂಜಿತ ವಜ್ರದಂಡದಿಂ ॥ ೨೩ ॥

ಪಂಚಮಾಂಕ

[ಬಳಿಕ ರಾಕ್ಷಸ ಕಂಚುಕಿಯು ಬರುವನು]

ರಾಕ್ಷಸ ಕಂಚುಕಿ—ಯಾರು ಅಲ್ಲಿ ಹವಳದ ತೋರಣದ ಬಾಗಿಲಲ್ಲಿರುವವರು?

[ಮತ್ತೊಬ್ಬ ರಾಕ್ಷಸನು ಬಂದು]

ರಾಕ್ಷಸ—ಅಯ್ಯ! ನಾನು ಮಾಡತಕ್ಕುದೇನು?

ರಾ. ಕಂ—ಹೋಗು, ಮಹಾರಾಜನಪ್ಪಣೆಯಂತೆ ವಿದ್ಯುಜ್ಜಿಹ್ವನನ್ನು ಕರೆದುಕೊಂಡು ಬಾ.

ರಾಕ್ಷಸ—ಅಯ್ಯ! ಅಂತೆಯೆ. (ಹೋಗುವನು)

ರಾ. ಕಂ—ಆಹಾ! ರಾಕ್ಷಸ ವಂಶದೇಳಿಗೆಯು ತೊಲಗಿ, ಸಕಲ ಸಾಧನಗಳೂ ಹಾಳಾಗಿ, ಶೂರರೆಲ್ಲರೂ ಮಡಿದು, ತನ್ನ ಹರಣವುಳಿಯುವುದೂ ಕೂಡ ದಿಟವಿಲ್ಲದಂತಾಗಿದ್ದರೂ ಇನ್ನೂ ಮಹಾರಾಜನ ಬುದ್ಧಿಯು ಪ್ರಸನ್ನವಾಗದಿರುವುದಲ್ಲ! ಯಾವನು ತಾನೆ—

ಚಂ॥ ಅಲುಗುವ ವೀಚಿ ತಾಡಿತ ಭಯಂಕರ ವೇಲೆಯಿನೊಪ್ಪಿ ಕೊರ್ವಿ ಸಂ।
ಚಲಿಸುವ ನಕ್ರ ಸಂಕುಲದೆ ಕೂಡಿ ವಿರಾಜಿಪ ನೀ ಲಿ ನೀರಿನಿಂ॥
ದಲೆ ಮೆರೆವೀ ಸಮುದ್ರಮನತೀವ ವಿಲಾಸದೆ ದಾಂಟಿ ಬಂದುದಂ।
ಸಲೆ ನೆರೆ ನೋಡಿಯುಂ ಗಡವನಾಪ್ತೆಯನೀಯುತೆ ಶಾಂತನಾಗಿಸಂ॥ ೧॥

ಮತ್ತು

ಕಂ॥ ದನುಜರ್ ಪ್ರಹಸ್ತಮುಖರಾ ।
ದನಿಬರ್ ವರ ವೀರ ಕುಂಭಕರ್ಣ ಸಮೇತಂ ॥
ತನುವಳಿದರ್ ರಾಘವನಿಂ ।
ಖಿನದಂ ಪೋಣೆಂದ್ರಜಿತನುಮಿಾಗಳೆ ಮಡಿದಂ ॥ ೨ ॥

ಹೀಗಿದ್ದರೂ

ಮ॥ ನನೆವಿಲ್ಲಂಗೊಳಗಾಗಿ ನೀತಿಯನಿತಂ ತಾನೇ ಕರಂ ಬಲ್ಲೆನೆಂ ।
ದೆನುತುಂ ಮಂತ್ರಿಯ ವಾಕ್ಯಮುಂ ಗಣಿಸದಂತಣ್ಮಂ ಮನಂಗೊಂಡು ಮೇಣ್ ॥
ಮೊನೆಯೋ ದಲ್ ವರಮೆಂದು ಕೂರ್ತು ಚಲದೊಳ್ ಶ್ರೀರಾಮ ಸಂಪ್ರೀತೆಯುಂ ।
ಜನಕೋದ್ಭೂತೆಯುಮಾದ ಸೀತೆಯನಹಾ ಕೊಂಡೀಯದಿರ್ಪಂ ಗಡಾ॥೩॥

ವಿದ್ಯುಜ್ಜಿಹ್ವ—(ಪ್ರವೇಶಿಸಿ) ಆರ್ಯನಿಗೆ ಸುಖವೆ?

ಕಾಂಚುಕೀಯ—ವಿದ್ಯುಜ್ಜಿಹ್ವ! ಹೋಗು. ಮಹಾರಾಜನ ಮಾತಿನಂತೆ ರಾಮ ಲಕ್ಷ್ಮಣರ ಶಿರಗಳಿಗೆ ಪ್ರತಿಶಿರಗಳನ್ನು ತೆಗೆದುಕೊಂಡು ಬಾ.

ವಿದ್ಯುಜ್ಜಿಹ್ವ—ಮಹಾರಾಜನಪ್ಪಣೆಯಂತೆಯೆ. (ಹೋಗುವನು)

ಕಾಂಚುಕೀಯ—ನಾನೂ ಸಹ ಮಹಾರಾಜನ ಬಳಿಯನ್ನು ಸೇರುವೆನು. (ಹೋಗುವನು)

[ಇದು ವಿಷ್ಕಂಭಕವು]

[ಆಮೇಲೆ ರಾಕ್ಷಸೀಗಣ ಪರಿವೃತೆಯಾದ ಸೀತೆಯು ಬರುವಳು]

ಸೀತೆ—ಆರ್ಯಪುತ್ರನ ಆಗಮನದಿಂದ ಸಂತೋಷಗೊಂಡಿದ್ದ ನನ್ನ ಮನಸ್ಸಿಗೀಗ ಗಾಬರಿಯೇಕುಂಟಾಯಿತು? ಅಪಶಕುನಗಳು ಕಾಣುತ್ತಿವೆ.

ಹೀಗಿದ್ದರೂ ಅಂತರಂಗದುತ್ಕರ್ಷವು ಹೆಚ್ಚುತ್ತಲೇ ಇರುವುದು. ಸರ್ವಾರ್ಥ ಕರ್ತೃವಾದ ದೇವರು ನಿಮ್ಮೃದ್ಧಿಯನ್ನು ಪಾಲಿಸಲಿ.

[ಅನಂತರ ರಾವಣನು ಬರುವನು]

ರಾವಣ—

ಚಂ॥ ಧನಪತಿಯುಂ ತಗುಳ್ಚಿ ಕರವುಂದಿನ ಕಾಳೆಗದಲ್ಲಿ ಗೆಲ್ದು ಚೆ।
ನ್ನನೆ ಪಿಡಿದೆನ್ನ ಕೈಬಸವುನಾಗಿಸಿದೀ ಪುರ ರಾಜಲಕ್ಷ್ಮಿ ಮೇಣ್ ॥
ಘನ ವಿಮಲಾಂಬುವೊಳ್ ಬಳೆದ ತಾವುರೆಯುಂ ಪಿಡಿದಾಕೆಯಿಾಗಳೆ।
ನ್ನ ನಿಳಯುಮಂ ಬಿಸುಟ್ಟು ಪೊರಪೋಗಲಭೀಪ್ಸಿತಳಾದಳಲ್ತೆ ಹಾ ॥ ೪ ॥

ಭಗವತಿ! ನಿಲ್ಲು ನಿಲ್ಲು, ಹೋಗದಿರು. ಏನು ಹೇಳುವೆ? 'ನಿನ್ನನ್ನು ಬಿಟ್ಟು ರಾಮುನನ್ನು ಸೇರುವೆ'ನೆಂತಲೊ? ಆಃ! ಹೋಗು, ಹಾಳಾಗು.

ಕಂ॥ ಬಲವಂತದಿನಲೆಯಾಗಳು।
ಮೆಲೆಗೇ ನಿನ್ನಂ ಕುಬೇರ ಗೃಹದಿಂ ತಂದೆಂ ॥
ಕಲಹದೊಳವನಂ ಕೊಲ್ಲುತೆ।
ಬಲವಂತದಿನೀಗಳುಂ ಕರಂ ಪಿಡಿತರ್ಪೆಂ ॥ ೫ ॥

ಇವಳಿಂದೇನು? ಸೀತೆಯನ್ನೇ ಒಲಿಯಿಸುವೆನು. (ಮನ್ಮಥ ಬಾಧೆಯನ್ನು ತೋರಿಸಿ) ಪೂವಿಲ್ಲನ ಬಲವು ಬಲೀಯುವಾದುದು; ಏಕೆಂದರೆ—

ಮ॥ ವರ ಸೀತಾನನಮುಂ ವಿಲೋಕಿಸಿಯೆನತ್ತಕ್ಷಿದ್ವಯುಂ ನಿದ್ರೆಯುಂ।
ಮರೆಗುಂ ರಾತ್ರಿಯೊಳಾಕೆಯುಪ್ಪುಗೆಸೊಗಕ್ಕೊಲ್ದಾಸಿಪೆನ್ನಂಗವಿಾ ॥
ಪರಿಯೊಳ್ ಕುಂದುತೆ ಬೆಳ್ಪನೊಂದುಗುವುಳಲ್ ತೋರ್ಗುಂ ವಿಾಗಿಲ್ಚೆಲ್ಪಿ ನೊಳ್।
ನೆರೆ ಹಾ ಗೆಲ್ದನಿಲಾತ್ರಯುಂ ಗೆಲಿದನಂ ಲಂಕೇಶನಂ ಪೂಸರಂ ॥ ೬ ॥

(ಬಳಿಸಾರ್ದು)

ಕಂ॥ ಅರವಿಂದ ಪಲಾಶಾಂಬಕೆ ।
ನರ ಗತ ಮನವುಳಿ ಮನೋಧಿನಾಥೇ ಸೀತೆ ॥
ಧುರದೊಳ್ ಲಕ್ಷ್ಮಣನುಂ ನಿ ।
ನ್ನರಸನುಮುರುಳ್ವುದನಭೀಕ್ಷಿಸೆನ್ನಯ ಕಣೆಯಿಂ ॥ ೭ ॥

ಸೀತೆ—ಛೀ! ಮೂಢನಾದ ರಾವಣನೆ! ಮಂದರ ಗಿರಿಯನ್ನು ಕೈಯಿಂದ ತೂಗಲೆಳಸುವವನೆ!

ರಾಕ್ಷಸ—(ಬಂದು) ಮಹಾರಾಜನಿಗೆ ಜಯವಾಗಲಿ—

ಕಂ॥ ಇವೆ ನೋಳ್ಪುದು ಮಾನಿಸರಾ ।
ಬುವಿಯರ ಮಕ್ಕಳ್ಗಳುತ್ತಮಾಂಗಗಳರಸಾ ॥
ಬವರದೊಳವರ್ಗಳನಿರಿಯುತೆ ।
ಭವತ್ಪ್ರಮೋದಾರ್ಥಮಾಗಿ ತಂದಂ ಕುವರಂ ॥ ೮ ॥

ರಾವಣ—ಸೀತೆ! ನೋಡು ನೋಡು, ಆ ಮನುಷ್ಯರ ತಲೆಗಳು!

ಸೀತೆ—ಹಾ! ಆರ್ಯಪುತ್ರ (ಎಂದು ಮೂರ್ಛೆಯಿಂದ ಬೀಳುವಳು).

ರಾವಣ—

ಕಂ॥ ಬಿಡು ಬಿಡು ಭಾವಮನಿಂ ನೀಂ ।
ತಡೆಯದೆ ಸೀತೇ ಗತಾಯುವೀ ಮಾನವನೊಳ್ ॥
ನುಡಿವೆಂ ಕೇಳೀಗಳೆ ಸಿರಿ ।
ಗಡಣಮನೊಂದುವೆ ಕಡಾ ಸುವಿಸ್ತರ ನಯನೇ ॥ ೯ ॥

ಸೀತೆ—(ಮೂರ್ಛೆಯಿಂದ ತಿಳಿದು) ಹಾ! ಆರ್ಯಪುತ್ರ! ಪರಿಮಳಯುಕ್ತವಾದ ಹೊಸದಾವರೆಯನ್ನು ಹೋಲುವ ಮೊಗವನ್ನು ನೋಡುತ್ತಿರುವ ನಾನು ಅತಿ ಧೀರೆಯೂ ಮಂದಭಾಗಿನಿಯೂ ಅಲ್ಲವೆ! ಹಾ! ಆರ್ಯಪುತ್ರ!

ಇಂತಹ ದುಃಖಸಮುದ್ರದಲ್ಲಿ ನನ್ನನ್ನಿಟ್ಟು ಎಲ್ಲಿ ಹೋಗಿರುವೆ? ಇನ್ನೂ ನಾನು ಸಾಯದಿರುವೆನಲ್ಲ! (ಹಾಗೆಯೇ ಯೋಚಿಸಿ) ಒಂದು ವೇಳೆ ಇದು ಕಪಟವಾಗಿರಬಹುದೆ? ಭದ್ರ! ಆರ್ಯಪುತ್ರನಿಗೆ ಈಯವಸ್ಥೆಯು ಯಾವ ಖಡ್ಗದಿಂದಾಯಿತೋ ಅದೇ ಖಡ್ಗದಿಂದ ನನ್ನನ್ನೂ ಸಂಹರಿಸು.

ರಾವಣ—

ಕಂ॥ ಕಲಹದೊಳಿಂದ್ರಜಿತಂ ಕೇಳ್ ।
ಕೊಲಲಾ ಲಕ್ಷ್ಮಣ ಸಮೇತ ಮನುಜಾಧಮನಂ ॥
ನಲವಿಾಗಳದಾರ್ ನಿನ್ನಂ ।
ನಲವಿಂ ಬಿಡಿಸಲ್ಕೆ ಬರ್ಪರಕಟಾ ಕಾಣೆಂ ॥ ೧೦ ॥

(ತೆರೆಯಲ್ಲಿ) ರಾಮನು! ರಾಮನು!

ಸೀತೆ—ಚಿರಂಜೀವಿಯಾಗಿರಲಿ!

ರಾಕ್ಷಸ—(ಸಂಭ್ರಮದಿಂದ ಬಂದು) ರಾಮನು! ರಾಮನು!

ಸೀತೆ—ಬಹುಕಾಲ ಬದುಕಲಿ! ಏನು ರಾಮನಿಂದ?

ರಾಕ್ಷಸ—ಮಹಾರಾಜನೆ! ಪ್ರಸನ್ನನಾಗಬೇಕು, ಪ್ರಸನ್ನನಾಗಬೇಕು. ಮಿಂಚಿಹೋದ ಸಂಗತಿಯನ್ನು ಅರಿಕೆ ಮಾಡುವ ಭರದಲ್ಲಿ ಹಿಂದು ಮುಂದು ನೋಡಲಿಲ್ಲ.

ರಾವಣ—ಹೇಳು ಹೇಳು, ಆ ಮನುಜ ತಾಪಸನಿಂದೇನಾಯಿತು?

ರಾಕ್ಷಸ—ಮಹಾರಾಜನೆ! ಚಿತ್ತವಿಸಬೇಕು.

ಕಂ॥ ಅನುಜಂ ಲಕ್ಷ್ಮಣ ಸಹಿತಂ ।
ಮೊನೆಗಾರಂ ರಾಮನಮಮ ಲಂಕೇಶ್ವರ ಕೇಳ್ ॥
ಕೊನೆಗೊತ್ತಿ ನಿನ್ನುಮಂ ಹಾ ।
ಕೊನೆಗಾಣಿಸಿದಂ ಕುಮಾರನಂ ಕೊಳುಗುಳದೊಳ್ ॥ ೧೧ ॥

ರಾವಣ—ಆಃ! ಮರುಳ! ಹೇಡಿ!

ಕಂ॥ ನಾಕಿಗಳುಮನಸುರರುಮಂ ।
ಸಾಕೆನೆ ಸೋಲಿಸುತೆ ಪೆರ್ಮೆಗೊಂಡವನಾವಂ ॥
ಆ ಕಲಿಯಿಂದ್ರಜಿತನುಮನ ।
ನೀಕಪೊಳಿರಿಯಲ್ಕೆ ತಕ್ಕನೇ ಮನುಜನವಂ ॥ ೧೨ ॥

ರಾಕ್ಷಸ—ಮಹಾರಾಜನೆ! ಪ್ರಸನ್ನನಾಗಬೇಕು, ಪ್ರಸನ್ನನಾಗಬೇಕು. ಸ್ವಾಮಿಯ ಪಾದಮೂಲದಲ್ಲಿ ಕುಮಾರನ ವಿಷಯವಾಗಿ ಸುಳ್ಳನ್ನು ಬಿನ್ನವಿಸೆನು.

ರಾವಣ—ಹಾ! ವತ್ಸ! ಮೇಘನಾದಾ! (ಎಂದು ಮೋಹಗೊಳ್ಳುವನು)

ರಾಕ್ಷಸ—ಮಹಾರಾಜನೆ! ಸೈರಿಸಿಕೊಳ್ಳಬೇಕು, ಸೈರಿಸಿಕೊಳ್ಳಬೇಕು.

ರಾವಣ—

ಕಂ॥ ಹಾ ಕಂದ ಲೋಕ ಭೀಕರ ।
ಹಾ ಕಂದ ಕೃತಾಸ್ತ್ರಯಿಂದ್ರಜೇತಾ ಖ್ಯಾತಾ ॥
ಹಾ ಕಂದ ವೀರ ವತ್ಸಲ ।
ಹಾ ಕಂದಮುಯೆನ್ನನುಳಿಯುತೇಕೆ ಪೋದಾ ॥ ೧೩ ॥

[ಎಂದು ಮರಳಿ ಮೋಹಗೊಳ್ಳುವನು]

ರಾಕ್ಷಸ—ಅಯ್ಯೋ! ಮೂರು ಲೋಕಗಳನ್ನೂ ಗೆದ್ದ ಲಂಕೇಶ್ವರನಿಗೂ ಕೂಡ ಹಾಳು ವಿಧಿಯು ಈಯವಸ್ಥೆಯನ್ನುಂಟುಮಾಡಿತಲ್ಲ! ಮಹಾರಾಜನೆ, ಚೇತರಿಸಿಕೊಳ್ಳಬೇಕು, ಚೇತರಿಸಿಕೊಳ್ಳಬೇಕು.

ರಾವಣ—(ಚೇತರಿಸಿಕೊಂಡು) ಆಃ! ಇಷ್ಟು ಕೇಡಿಗೆಲ್ಲ ಕಾರಣಭೂತೆಯಾದ ಈ ಸೀತೆಯಿಂದಿನ್ನು ಆಗಬೇಕಾದುದೇನು? ಅಥವಾ, ಜಗತ್ತ್ರಯವನ್ನು ಜಯಿಸಿದ್ದರೂ ವಿಫಲೆಯೂ ಚಪಲೆಯೂ ಎನಿಸಿದ ಶ್ರೀಯಿಂದ ತಾನೆ ಉಪಯೋಗವೇನು? ಅಯ್ಯೊ! ದುರದೃಷ್ಟವೆ! ಈಗಲೂ ಹೆದರಿ ನಡುಗುತ್ತಿರುವೆಯೇನು?

ಕಂ॥ ತನುಜಾತನಿಂದ್ರಜೀತಂ ।
ತನುವಂ ತೊರೆದತ್ತಣಿಂದೆ ತವೆ ವಿಗತ ಸ್ನೇ ॥
ಹನುಮತಿ ಕಠೋರ ಹೃದಯನು ।
ಮೆನಿಪೀ ದಶವದನನಿನ್ನು ಮಿರ್ಪನಲೇ ಹಾ ॥ ೧೪ ॥

[ಎಂದು ಸಂತಾಪದಿಂದ ಬೀಳುವನು]

ರಾಕ್ಷಸ—ಓಹೊ! ರಜನೀಚರವೀರರಿರಾ! ಮಹಾರಾಜನು ಈ ಯವಸ್ಥೆ ಯಲ್ಲಿರುತ್ತಿರುವಲ್ಲಿ ಒಳಭಾಗದ ರಕ್ಷಣೆಗಾಗಿ ಇರುವ ನೀವೆಲ್ಲರೂ ಜಾಗರೂಕತೆಯಿಂದಿರತಕ್ಕದು.

[ತೆರೆಯಲ್ಲಿ]

ಎಲೈ! ರಕ್ಕಸಗಲಿಗಳಿರ! ಕಾಳೆಗದಲ್ಲಿ ಶೂರರಾದ ಪ್ರಹಸ್ತ ನಿಕುಂಭ ಕುಂಭಕರ್ಣ ಮೇಘನಾದರೆಲ್ಲರೂ ಮಡಿದರೆಂದು ತಿಳಿದು ಅಂಜಿಕೆಯಿಂದ ಹಿಂಜರಿಯದಿರಿ. ವಿಶ್ವಲೋಕವಿಜಯನೂ, ಇಪ್ಪತ್ತು ತೋಳುಗಳಿಂದ ಕಂಗೊಳಿಸುವವನೂ, ಸ್ವಾಮಿಯೂ ಎನಿಸಿದ ಲಂಕೇಶ್ವರನಿರುತ್ತಿರಲಾಗಿ, ದೇವಯುದ್ಧಗಳನ್ನೆಲ್ಲ ಗೆದ್ದಿರುವ ನೀವು ಕಳವಳಿಸಿ ಓಡಿಹೋಗುವುದು ತರವಲ್ಲ.

ರಾವಣ—(ಕೇಳಿ, ಕೋಪದಿಂದ) ಹೋಗು, ಮುಂದಿನ ಸಂಗತಿಯನ್ನು ತಿಳಿದು ಬಾ.

ರಾಕ್ಷಸ—ಮಹಾರಾಜನಾಜ್ಞೆ. (ಹೋಗಿ, ಬಂದು) ಮಹಾರಾಜನಿಗೆ ಜಯವಾಗಲಿ. ಈ ರಾಮನಾದರೊ—

ಮ॥ ತುಳಿಲೊಳ್ ನಿನ್ನ ಕುಮಾರನಂ ಕೆಡವಿ ಕೊರ್ವಿಂ ನಿನ್ನುಮಂ ಮೀರಿ ಕೈ ।
ದಳದೊಳ್ ಕೂರ್ಗಣೆದೊಟ್ಟ ಬಿಲ್ಪಿಡಿದು ಬೆಟ್ಟಂಬೋಲ್ವ ಪೆರ್ಗೋತಿ ಜಂ॥
ಗುಳಿಯಿಂದಂ ಬಳಸಿಾಂತು ಬರ್ಪ ನಗೆಯಿಂ ಮಿಕ್ಕೊಪ್ಪುತಿರ್ಪಚ್ಚಿಯಂ ।
ತಳೆದೀ ಲಂಕೆಯನೆಲ್ಲಮಾಗಳುರಿಪಲ್ಕಾಸಿಪ್ಪವೋಲ್ ಸಾರ್ದಪಂ ॥ ೧೫ ॥

ರಾವಣ—(ಕಷ್ಟದಿಂದೆದ್ದು, ಕೋಪದಿಂದ) ಅವನೆಲ್ಲಿ? ಅವನೆಲ್ಲಿ? (ಎಂದು ಕತ್ತಿಯನ್ನು ಹಿಡಿದು)

ಮ॥ ಮಲೆವೈರಾವತ ದಂತಿ ಕುಂಭ ತಟಮುಂ ಭೇದಿಪ್ಪ ಬಲ್ಗಜ್ಜದೊಳ್ ।
ಸಲೆ ಸಂದೊಪ್ಪುತುಮೆನ್ನ ಕೈಯ್ಯೊಳೆಸೆವೀ ಕೂರ್ವಾಳ್ ಕರಂ ಬೇಗದಿಂ ॥
ದಲೆ ನಿನ್ನಂ ಮುಳಿಸಿಂಗೆ ಕಾಣಿಕೆಯೆನಲ್ ಬಲ್ಪಿಂದೆ ಕೈಗೊಳ್ಗುಮಿ ।
ನ್ನೆಲವೋ ಜಾವಳ ದುಷ್ಟತಾಪಸನೆ ನಿಲ್ ನಿಲ್ ಪೋಪೆಯೇ ತಾಣಮುಂ॥೧೬॥

ರಾಕ್ಷಸ—ಮಹಾರಾಜನೆ! ಅತಿ ಸಾಹಸವನ್ನು ಬಿಡು.

ಸೀತೆ—(ಸ್ವಗತ) ಕಾರಣವೊಂದೂ ಇಲ್ಲದೆ ಆಯೋಗ್ಯವೂ ಅಸಿಷ್ಟವೂ ಆದ ಈ ಕೆಲಸಗಳನ್ನು ಮಾಡುತ್ತಿರುವ ರಾವಣನಿಗೆ ಬೇಗನೆ ಕೇಡು ಬರುವುದು.

ರಾವಣ—(ಸೀತೆಯನ್ನು ನಿಟ್ಟಿಸಿ) ಈಕೆಯ ಸಲುವಾಗಿ ನನ್ನ ಒಡ ಹುಟ್ಟಿದವರೂ ಮಕ್ಕಳೂ ಗೆಳೆಯರೂ ಬಹು ಮಂದಿ ತನುವಳಿದರು. ಆದಕಾರಣ, ಹಗೆಯನ್ನು ನೆನೆಯುತ್ತಿರುವ ಇವಳ ಹೃದಯವನ್ನು ಸೀಳಿ ಕರುಳುಗಳನ್ನು ಧರಿಸಿಕೊಂಡು ಸಿಡಿಲಿಗೆ ಸರಿಯಾದ ಈ ಖಡ್ಗದೇಟಿನಿಂದ ಆ ಇಬ್ಬರು ಮನುಷ್ಯರಿಂದ ಕೂಡಿದ ಕಪಿಕುಲವನ್ನೆಲ್ಲ ಧ್ವಂಸಗೊಳಿಸು ವೆನು. (ಎಂದು ಕತ್ತಿಯೆತ್ತುವನು).

ರಾಕ್ಷಸ—ಮಹಾರಾಜನೆ! ಸೈರಿಸು, ಶಾಂತನಾಗು, ಹಗೆಯ ಕೆಚ್ಚ್ಚ ಹೆಮ್ಮೆಗಳನ್ನು ಮುರಿಯುವುದನ್ನು ಬಿಟ್ಟು ಈ ಹಾಳುಗೆಲಸದಿಂದೇನು? ಪೆಣ್ಗೊಲೆಯು ಯಾವಾಗಲೂ ಮಾಡತಕ್ಕುದಲ್ಲ.

ರಾವಣ—ಹಾಗಾದರೆ ತೇರನ್ನು ತೆಗೆದುಕೊಂಡು ಬಾ.

ರಾಕ್ಷಸ—ಮಹಾರಾಜನಾಜ್ಞೆ. (ಹೋಗಿ, ಬಂದು) ಮಹಾರಾಜನೆ! ಜಯಶೀಲನಾಗು. ಇದೋ ತೇರು.

ರಾವಣ—(ತೀರಸೇರಿ)

ಕಂ॥ ಬಿಲ್ಲೊಳ್ ಕೂರ್ಗಣೆದೊಟ್ಟಾಂ ।
ಭಲ್ಲನೆ ಬಿಡಲಸುವಸುಳಿಯಿ ನೋಡಿ ಸಿಳಿಂಪರ್ ॥
ತಲ್ಲಣಿಸಿ ಮುತ್ತೆ ರಾಮನ ।
ನುಲ್ಲಸದಿಂದಿದೆಕೊ ನೋಡಲಪ್ಪೆ ಸೀತೇ ॥ ೧೭ ॥

ಸೀತೆ—(ಮನಸ್ಸಿನಲ್ಲಿ) ಈಶ್ವರ! ನನ್ನ ಕುಲಕ್ಕೆ ತಕ್ಕ ನಡೆವಳಿಯಿಂದ ನಾನು ಆರ್ಯಪುತ್ರನನ್ನು ಅನುಸರಿಸುತ್ತಿರುವೆನಾದರೆ ಆರ್ಯಪುತ್ರನಿಗೆ ಜಯವು ಲಭಿಸಲಿ. (ತೆರಳುವರು)

ಷಷ್ಠಾಂಕ

[ಬಳಿಕ ಮೂವರು ವಿದ್ಯಾಧರರು ಬರುವರು]

ಎಲ್ಲರೂ—ಓಹೋ! ಇದೊ ಇಲ್ಲಿರುವೆವು! ಇದೊ ಇಲ್ಲಿರುವೆವು!

ಮೊದಲನೆಯಂ—

ಮ॥ ಮೆರೆವಿಕ್ಷ್ವಾಕು ನರೇಂದ್ರ ವಂಶ ವಿಪುಲೋದ್ಯತ್ಕೇತುವಾವಂ ಕರಂ ।

ಎರಡನೆಯಂ—

ದುರುಳಂ ರಾವಣನಂ ಕೊಲಲ್ಪುಗೆದವಂ ತಾನಾವನಾ ರಾಮನಾ ॥

ಮೂರನೆಯಂ—

ಧುರದೊಂದಚ್ಚರಿಯುಂ ವಿಲೋಕಿಪ ವಿಶೇಷಾಸಕ್ತಿಯಿಂದೊಂದಿದಾವ್ ।

ಎಲ್ಲರೂ—

ಭರದಿಂದೆಯ್ದಿದೆವಿಲ್ಲಿಗಾಗಳೆ ಗಡೈಕಿಲ್ಪೆಟ್ಟನಾ ಕೋಡಿನಿಂ ॥ ೧ ॥

ಮೊದಲನೆಯಂ—ಚಿತ್ರರಥ! ನೋಡು; ದೇವತೆಗಳು ದೇವರ್ಷಿಗಳು ಸಿದ್ಧರು ವಿದ್ಯಾಧರರು ಮುಂತಾಗಿ ಸರ್ವರೂ ಅಂತರಿಕ್ಷದಲ್ಲಿ ತುಂಬಿರುವರು. ಆದಕಾರಣ ನಾವು ಇವರಿರುವ ಸ್ಥಳವನ್ನೇ ಬಿಟ್ಟು ಏಕಾಂತವಾಗಿ ನಿಂತು ರಾಮ ರಾವಣರ ಯುದ್ಧವನ್ನು ನೋಡುವೆವು.

ಇಬ್ಬರೂ—ಹಾಗೆಯೇ ಸರಿ.

ಮೊದಲನೆಯಂ—ಆಹ! ಈ ಸಮರಾಂಗಣವು ಭಯೋತ್ಪಾದಕವಾಗಿಯೂ ದರ್ಶನೀಯವಾಗಿಯೂ ಇರುವುದೇ ಸರಿ. ಇಲ್ಲಿಯಾದರೊ—

Funding: IKS/Tattva Heritage. Digitization: Sarayu Trust/eGangotri

ಚಂ॥ ಅಸುರ ಶರೀರವೆಂಬ ಜಲದಿಂ ಕಪಿಸಂಕುಲಮೆಂಬ ವೀಚಿಯಿಂ।
ದಸಿತತಿಯೆಂಬ ನಕ್ರಸವಿಶೇಷದಿನೀ ಸಮರಾಂಗಣಂ ವಿರಾ॥
ಜಿಸುವುದು ನೋಡ ನೋಡ ರಘುನಾಯಕ ಚಂದ್ರಮ ಬಾಣ ರಶ್ಮಿಯಿಂ।
ಪೊಸೆದೊಸೆದುಕ್ಕುತುಕ್ಕುತೆಡೆವಿಡಾಬ್ಧಿ ಸಮುದ್ರವಪ್ಪೋಲ್ ಸಹಾ
ಯಕಾ ॥ ೨ ॥

ಎರಡನೆಯಂ—ನಿಜ, ನಿಜ! ಹಾಗೆಯೆ!

ಚಂ॥ ತರು ಗಿರಿ ಘಾತ ಜರ್ಝರಿತ ಶೀರ್ಷರಿವರ್ ಪಿಡಿಗುರ್ದಿನಿಂದೆ ಮೇಣ್।
ಹರಣಮನಿಂತು ಬಿಟ್ಟವರಿವರ್ ಗಡ ಬಲ್ಮೆಯನೊಂದಿ ಕೊರ್ವಿ ಬೊ॥
ಬ್ಬಿರಿವುತೆ ವಾಲಮಂ ನೆಗಪಿ ಕೋಪಿಸಿ ಕಣ್ಬಿಡುತೌಂಡುಗರ್ಜಿ ವಾ।
ನರರಿರಿಯಲ್ಕೆ ವಜ್ರಹತ ಶೈಲದವೋಲ್ ದನುಜಾಳಿ ತೋಱುಗುಂ ॥ ೩ ॥

ಮೂರನೆಯಂ—ಇವರನ್ನೂ ಸಹ ನೀವು ನೋಡಬೇಕು.

ಉ॥ ಕೂರಸಿಯುಂ ಕರಂ ಪಿಡಿದು ಕೋಪದೆ ಕಣ್ಬಿಡುತುರ್ಬಿ ಕೂಗುತುಂ।
ಕೋರೆಯ ಪಲ್ಗಳಂ ಕಿಱಿದು ಕಾಱುಗಿಲಂದದ ರಕ್ಕಸರ್ ಭಯಂ॥
ದೋರುತೆ ಬಾಯ್ಗಳ್ಬಿ ಕಪಿಸೈನ್ಯಮನೆಲ್ಲಮನೀಗಳೀ ಕೊಲ।
ಲ್ಕಾರಿದಜಂತೆ ಬಂದೆರಗುತುಂ ಭರದಿಂ ಕವಿಯುತ್ತುಮಿರ್ದಪರ್ ॥ ೪ ॥

ಮೊದಲನೆಯಂ—ಅಹಹಾ!

ಮ॥ ಕಣೆಯುಂ ವಾನರ ಸೈನ್ಯದೊಳ್ ಮುನಿವುತೆಚ್ಚುತ್ತಿರ್ದಪರ್ ದಾನವರ್।
ಎರಡನೆಯಂ—
ಕೆಣಸಿಂ ನೈಋತ ಸೇನೆಯೊಳ್ ಮಲೆಗಳಂ ಕಿತ್ತಿಕ್ಕುವರ್ ವಾನರರ್॥
ಮೂರನೆಯಂ—
ಮೊಣಕಾಲ್ಸಂಹತಿಯಿಂದೆಯುಂ ಪಿಡಿಯ ಬಲ್ಮುರ್ದಿಂದೆಯುಂ ಕಾಳೆಗಂ।
ಎಲ್ಲರೂ—
ಪೊಣರಲ್ ದಲ್ ಮೊದಲಾದುದೀಗಳನುಮಾ ಭೀಮಂ ಗಡಾ ನಿಟ್ಟಿಸಲ್ ॥೫॥

ಮೊದಲನೆಯಂ —ಇದೊ! ನೋಡಿ, ರಾವಣನು!

ಚಂ॥ ಮಿಸುನಿಯ ಕಾವನಾಂತು ಕರದೊಳ್ ಸೊಗದಿಂ ತಿರುಪುತ್ತೆ ಶಕ್ತಿಯಂ ।
ನಸು ನಿಡಿದಾದ ತನ್ನ ಕುಡು ಕೋರೆಯವಲ್ಗಳನ್ನೈದೆ ಕಾಣಿಸು ॥
ತ್ರಸವಸದಿಂದೆ ತೇಱ್ಪಿಡುತೆ ರಾಘವನಂ ನೆರೆ ನೋಡಿ ಕಾಯ್ದಪಂ ।
ಮಿಸುಪ್ಪುದಯಾದ್ರಿಯೊಳ್ ಪೆಱೆಯನೀಕ್ಷಿಸಿ ಸೈಸದ ಕೇತುವಂತೆವೋಲ್ ॥ ೬ ॥

ಎರಡನೆಯಂ—ನೀವಿರ್ವರೂ ರಾಮನನ್ನು ಸಹ ನೋಡಿ—

ಮ॥ ಎಡಗೆಯ್ಯೊಳ್ ಧನುವಾಂತು ಮತ್ತೆ ಬಲಗೆಯ್ಯಲ್ಲುತ್ತಮಂ ಸಾರಸಂ ।
ಬಿಡಿಪಂದಂದಿರುಪುತ್ತೆ ಭೂಮಿಯೊಳೆ ತಾಂ ನಿಂದೊಲ್ದು ತೇಱೇರ್ದ್ದ ತ ॥
ನ್ನೆಡೆಗೆಯ್ತ್ತುರ್ಪರಿಯಂ ವಿಲೋಕಿಸುತಮಿರ್ದರ್ಪ್ಪಂ ಕರಂ ರಾಘವಂ ।
ಕಡುಗೋಪಂಬಡೆದಾಜಿಯಲ್ಲಱುಮೊಗಂ ಕ್ರೌಂಚಾದ್ರಿಯಂ ಕಂಡ
ವೋಲ್ ॥ ೭ ॥

ಮೂರನೆಯಂ—ಹ! ಹ!! ಹ!!!

ಕಂ॥ ಈರೈದುದಲೆಯನೆಸೆದಾ ।
ಸಾರ ಯಮಾಂತಕ ಸಮಾನ ಶಕ್ತ್ಯಾಯುಧಮಂ ॥
ಧೀರಂ ಬಿಲ್ಲಾಣಂ ರಘು ।
ವೀರಂ ನಗುತಿದೆ ಕೊಳೀಗಳಿರ್ಕ್ಕಡಿಗೆಯ್ದಂ ॥ ೮ ॥

ಮೊದಲನೆಯಂ—

ಕಂ॥ ಬರಿದಾಗುತೆ ಶಕ್ತ್ಯಾಯುಧ ।
ಮುರುಳಲ್ಕೀಕ್ಷಿಸಿ ಕೆರಳ್ದು ಕಿಸುಗಣ್ಣಿಂ ನಿ ॥
ರ್ಜರ ರಿಪುರಾಜಂ ಸರಳ್ಗಳ ।
ಸರಿಯಂ ರಘುವರನ ಮೇಲೆ ಕಱೆಯುತ್ತಿರ್ಪಂ ॥ ೯ ॥

ಎರಡನೆಯಂ—ಅಹಹ! ರಾಮನ ಕಾಂತಿಯು—

ಕಂ॥ ರಾವಣ ಧಾರಾಧರದಿಂ ।
ದೀವರ್ಪ ಕಲಂಬ ಧಾರೆಗಳ್ ತೋಱುಗ್ಗಂ ರಾ ॥
ಜೀವಾಕ್ಷಂ ರಾಮನೊಳಹ ।
ಹಾ! ವೃಷಭನ ಮೇಲುರುಳ್ವ ನೀರ್ಪನಿಗಳವೋಲ್ ॥ ೧೦ ॥

ಮೂರನೆಯಂ—ಇವನಿವನು—

ಚಂ॥ ಮೊನೆ ಮೊದಲೊಳ್ ವರೂಥಮನಡರ್ದು ಸುವರ್ಣಮಯಂ ಮಹಾ ಶರಾ।
ಸನಮನೆಯಾಂತು ಕೂರ್ಗಣೆಗಳಂ ಬಿಡುತೆಯ್ತರುತಿರ್ಪ ರಾಕ್ಷಸೇಂ ॥
ಪ್ರನನಿದಿರಾಂತು ನೋಡ ನಡೆಗುಂ ನಡೆಯಿಂ ರಘು ರಾಮಚಂದ್ರನು ।
ರ್ಕನ ಗಜ ರಾಜನೊಳ್ ಗಮಿಪ ಕೂರ್ಪನೆ ಸಿಂಗಮದೆಂತುಟಂತೆ
ವೋಲ್ ॥ ೧೧ ॥

ಎಲ್ಲರೂ ಎಲೈ! ಇದೇನು! ಈ ಸ್ಥಳವು ಪ್ರಭೆಯಿಂದ ಪ್ರಕಾಶಿಸುತ್ತಿರುವುದು!

ಮೊದಲನೆಯಂ—ಓ! ಯುದ್ಧವಿಷಯದಲ್ಲುಂಟಾದ ಸಂದೇಹದಿಂದ ಮಹೇಂದ್ರನು ಮಾತಲಿಯೊಡನೆ ರಥವನ್ನು ಕಳುಹಿಸಿರುವನು.

ಎರಡನೆಯಂ—ಬಳಿಗೆ ಬಂದ ಮಾತಲಿಯನ್ನು ಕಂಡು ಆತನ ಮಾತಿನಂತೆ ರಾಮನು ರಥವನ್ನು ಹತ್ತಿದನು.

ಮೂರನೆಯಂ—ಇವನಾದರೆ—

ಕಂ॥ ದನುಜ ವಿನಾಶಕಮಮೃತಾ ।
ಶನ ವರ ಜಯದರ್ಪ ದೇಶಿಕಮೆನಿಪ್ಪೀ ಸ್ಯಂ ॥
ದನದೊಳ್ ಮೆಱೆಗುಂ ಮುನ್ನಾ ।
ಪಿನಾಕಿ ಮೂವೂಱ ಮೊನೆಯೊಳಂತಾ ತೇಜದಿಂ ॥ ೧೩ ॥

ಮೊದಲನೆಯಂ—ಓಹೋ! ಜಗಳವು ದೊಡ್ಡದೇ ಆಯಿತು.

ಕಂ॥ ಕಣೆಯುಂ ತುಂಡರಿಸುವ ಮಾ ।
ರ್ಗಣಂಗಳಂ ಬಿಡುವ ರಾಮ ರಾವಣರ ಮಹಾ ॥
ರಣಮುಂ ನಿರುಕಿಸಿ ನಿಂದುದು ।
ಪೊಣರ್ವುದುಮಂ ಮಱೆದು ದಾನವಾಸುರ ಸೈನ್ಯಂ ॥ ೧೪ ॥

ಎರಡನೆಯಂ—ಆಶ್ಚರ್ಯವು!

ಚಂ॥ ಮಿರುಪ ರಥಂಗಳೊಳ್ ಕುಳಿತುಮೆಲ್ಲೆಡೆಯುಂ ತೊಳಲುತ್ತೆ ಶೀಘ್ರದಿಂ ।
ಸರಳ್ಗಳನೆಚ್ಚೆಯೆಚ್ಚೆ ಮುಳಿಸಿಂ ಮಲೆವೀ ವರ ವೀರರಿರ್ವರುಂ ॥
ಕರಮರಿಯಲ್ ಸ್ವರಶ್ಮಿಯಿನಿಳಾತಳಮುಂ ದಹಿಸಲ್ಕೆ ಬಾನೊಳೊ ।
ರ್ವರದೆ ತಿಱುಂಗುತಿರ್ಪೆರಡು ನೇಸರವೋಲ್ ಮೆರೆಯುತ್ತಮಿರ್ದಪರ್ ॥೧೪॥

ಮೂರನೆಯಂ—ನೀವಿರ್ವರೂ ರಾವಣನನ್ನು ನೋಡಿ—

ಮ॥ ಕಡು ಕೂರಾದ ಸರಳ್ಗಳಂ ಸೆಳೆದಿಸುತ್ತಶ್ವಂಗಳಂ ನೋಯಿಸು ।
ತ್ತಿಡೆಗೊಂಡೊಪ್ಪುಗುಮಾ ಪತಾಕಿಕೆಯುಮಂ ಪಾಱಿಸ್ಗಿಯುದ್ದ ಬಲ್ಪಿಂದೆ ಮೇ॥
ಣ್ಪಿಡಿದುಂ ಗರ್ವಮನತ್ತಣಿಂದೆ ಬಿಡುತಂ ಬಾಣಂಗಳಂ ರಾಮನೊಳ್ ।
ದಡಿಗಂ ಬೊಬ್ಬಿರಿಗುಂ ಕುಲುಂಕಿ ನಲಿಗುಂ ನೀಟಿಸ್ಕಿಂ ಸಮುಂತೇಡಿಕುಂ ॥೧೫॥

ಮೊದಲನೆಯಂ—ಆಹ! ಈ ರಾಮನಾದರೆ—

ಮ॥ ತನುಗೆಯ್ದಿಯ್ದೆ ಶರೀರಮುಂ ಮನದೊಳೀಪಚ್ಛಿಂತಿಗೊಂಡೊರ್ಮೆ ಬ ।
ರ್ಪನಿತುಂ ಕೂರ್ಗಣೆಗಂಡು ಮಾರ್ಮಸಗಿ ಚೆಂಗಣ್ಗಾಳ್ದಿ ಮಧ್ಯಾಹ್ನ ಸೂ ॥
ರ್ಯನವೋಲ್ ರಾಜಿಸಿ ತಾನೆ ವೀರನೆನಿಸಿರ್ದಂ ಮಾತಲೀ ವಾಕ್ಯದಿಂ ।
ದಿನಿಸಣ್ಮಂ ತಳೆದೆಚ್ಚನಲ್ತೆಯಿದೆಕೊಳ್ ದಿವ್ಯಾಸ್ತ್ರಮುಂ ಪಾರ್ಥಿವಂ ॥೧೬॥

ಎರಡನೆಯಂ—ಆಹ! ಈಯಸ್ತ್ರವು—

ಮ॥ ರವಿ ವೈಶ್ವಾನರಯುಕ್ತ ತ್ರೈಕ್ಷ್ಣ್ಯ ವನಿತಂ ಸಂದೊಪ್ಪುಮೀ ತೀಕ್ಷ್ಣಧಾ ।
ರೆ ಬಲಂ ರಾಘವ ಬಾಹು ವೇಗದೆ ರಯಂಬೆತ್ತೆಯ್ದುಗುಂ ನೋಡ ವಾ ॥
ನವ ಚಕ್ರೇಶ್ವರನಂ ತಗುಳ್ದು ತಲೆಯಂ ಸೆಂಡಾಡಿಯಾಗಳ್ ಸಶೀ ।
ಘ್ರವೆನಲ್ ಬರ್ಕುಗುಮಲ್ತೆ ಆಹ ಮಗುಟ್ದಿಂ ಸೇರಲ್ ನರಾಧೀಶನಂ॥೧೭॥

ಎಲ್ಲರೂ—ಭಲೆ! ರಾವಣನು ಕೆಳಗೆ ಬಿದ್ದನು.

ಮೊದಲನೆಯಂ—

ಕಂ॥ ಖಳನಳಿದುದನೀಕ್ಷಿಸಿ ಪೂ ।
ಮಳೆಗಱೆಗುಂ ಗಳ ವಿಯತ್ತಳಂಗಳಿನಮರರ್ ॥
ಮೊಳಗುಗುಮಮಮಾ ದಿವದಿಂ ।
ದಳವಿಂದಂ ಸಮುಧುರಂ ಸಕುಶಲಂ ಪಱೆಗಳ್ ॥೧೮॥

ಎರಡನೆಯವಂ—ಆಗಲಿ! ದೇವಕಾರ್ಯವು ಸಿದ್ಧಿಸಲಿ!

ಮೊದಲನೆಯವಂ—ಸರಿ, ಬನ್ನಿ. ಸರ್ವಹಿತನಾದ ಶ್ರೀರಾಮಚಂದ್ರ ನನ್ನು ನಾವೂ ಮನ್ನಣೆಗೊಳಿಸುವೆವು.

ಇಬ್ಬರೂ—ಅಹುದು, ಇದು ಮೊದಲನೆಯ ಕೆಲಸವು. (ಎಂದೆಲ್ಲರೂ ತೆರಳುವರು)

[ಇದು ವಿಷ್ಕಂಭಕವು]

[ಬಳಿಕ ರಾಮನು ಪ್ರವೇಶಿಸುವನು]

ರಾಮ—

ಮ॥ ಸರಳಿಂ ನೋಯಿಸಿ ನಾಡೆ ನೆರ್ಗೆ ರಣದೊಳ್ ರಾತ್ರಿಂಚರಾಧೀಶನಂ ।
ದೊರೆಯಂ ಮಾಡಿ ನಿಜಂ ವಿಭೀಷಣನನೀ ಲಂಕಾಪುರಕ್ಕಿಂತುಟು ॥
ತ್ವರಿಸಿದೋರ್ವೀಳ್ಗಳಿನೀ ವಿಶೇಷ ಬಲದಿಂದಪ್ಪ ಪ್ರತಿಜ್ಞಾಬ್ಧಿಯಂ ।
ತೆರಳ್ಚಿಂ ಸಂಶವಿಸಲ್ಕೆ ಬಂಧು ಸಹಿತಾಂ ಮತ್ಕಾಂತೆಯಂ ಸೀತೆಯಂ ॥೧೯॥

ಲಕ್ಷ್ಮಣ—(ಬಂದು) ಜಯವಾಗಲಾರ್ಯನಿಗೆ! ಪೂಜ್ಯೆಯಾದ ದೇವಿಯು ಆರ್ಯನ ಬಳಿಗೆ ಬರುತ್ತಿರುವಳು.

ರಾಮ—(ಯೋಚಿಸಿ) ವತ್ಸ! ಲಕ್ಷ್ಮಣ—

ಕಂ॥ ಪಗೆವನೆಯೊಳಿರ್ದಳಾಯೆಡೆ ।
ತಗದುದು ನೆಗಳ್ದಿರಲುಮಿರ್ಕೆಮದಜುಂದವಳಾ ॥
ನಗೆ ಮೊಗಮಂ ನೋಳ್ಪೆನ್ನಯ ।
ಮಿಗೆ ಧೃತಿಯಂ ತಡೆಯುತಿರ್ಪ್ಪುಗುಂ ಸಿಟ್ಟೀಗಳ್ ॥ ೨೦ ॥

ಲಕ್ಷ್ಮಣ—ಆರ್ಯನಾಜ್ಞೆಯಂತಾಗಲಿ. (ಹೋಗುವನು)

ವಿಭೀಷಣ—ಜಯವಾಗಲಾರ್ಯನಿಗೆ! ದೇವ—

ಕಂ॥ ನಿನ್ನಯ ತೋಳ್ಗಳ ಬಲ್ಮೆಯಿ ।
ನುನ್ನತ ಸಂಕಟಮನಳಿದ ನಿನ್ನರಿಮೆಯ್ಯಾಳ್ ॥
ನಿನ್ನ ಹಸಾದದೆ ಸೇರ್ದಳ್ ।
ನಿನ್ನಂ ಮುನ್ ಖಳ ಕುಲಚ್ಯುತ ಶ್ರೀಯಾವೋಲ್ ॥ ೨೧ ॥

ರಾಮ—ವಿಭೀಷಣ! ರಜನಿಚರಾವಮರ್ಶನದಿಂದ ದೋಷಯುಕ್ತೆಯೂ ಇಕ್ಷ್ವಾಕು ವಂಶಕ್ಕೆ ಕಳಂಕಭೂತೆಯೂ ಆದಾಕೆಯು ಸ್ವಲ್ಪ ಅಲ್ಲಿಯೇ ಇರಲಿ. ಲಂಕಾಧಿಪ! ತಾತನೂ ಅರಸನೂ ಎನಿಸಿದ ದಶರಥನ ಸಲುವಾಗಿ ಅವಳು ನನ್ನನ್ನು ನೋಡುವುದು ಅಯುಕ್ತವು. ಮತ್ತು—

ಕಂ॥ ಅಳಿಗಜ್ಜಮಾನೊಲಿದದಜಿಯೊಳ್ ।
ಮುಳುಂಗುವವನಂ ನಿವಾರಿಸುವನಾಪ್ತನವಂ ॥
ಗೆಳೆಯನ ಅಂತಲ್ಲದವಂ ।
ತಿಳಿಯಲ್ ಪಗೆಯಲ್ತೆ ಪೇಟಿ ಲಂಕಾಧೀಶಾ ॥ ೨೨ ॥

ವಿಭೀಷಣ—ಸ್ವಾಮಿಯು ಪ್ರಸನ್ನನಾಗಬೇಕು.

ರಾಮ—ಇನ್ನುಮೇಲೆ ನೀನು ನನ್ನನ್ನು ಪೀಡಿಸಬಾರದು.

ಲಕ್ಷ್ಮಣ—(ಪ್ರವೇಶಿಸಿ) ಆರ್ಯನಿಗೆ ಜಯವಾಗಲಿ! ಪೂಜ್ಯನ ಅಭಿಪ್ರಾಯವನ್ನು ಕೇಳಿ ಆರ್ಯೆಯು ಅಗ್ನಿಪ್ರವೇಶಾರ್ಥವಾಗಿ ಆರ್ಯನಾಜ್ಞೆಯನ್ನು ಪ್ರತೀಕ್ಷಿಸುತ್ತಿರುವಳು.

ರಾಮ—ಲಕ್ಷ್ಮಣ! ಈ ಹದಿಬದೆಯ ಬಗೆಯಿರವನ್ನು ಅನುಸರಿಸು.

ಲಕ್ಷ್ಮಣ—ಆರ್ಯನಾಜ್ಞೆ! (ಎಂದು ಬರದು) ಅಯ್ಯೋ! ಕಷ್ಟವು.*

ಕಂ॥ ನುಡಿಗೊಂಡತ್ತಿಗೆ ಮೀಸಲ್ ।
ನಡೆವಳಿಯಂ ಕಂಡು ಮತ್ತಮಣ್ಣನ ಬೆಸನಂ ॥
ಬಿಡಿದೆನ್ನಜೀವಜ ಕೆಳೆಗಳ ।
ನಡುಸಿಲ್ಕಲಕುತ್ತಮಿರ್ಕ್ಕುಮಕಟಾ ಏನೆಂ ॥ ೨೩

ಯಾರಲ್ಲಿ?

ಹನೂಮಾನ್—(ಬಂದು) ಕುಮಾರನಿಗೆ ವಿಜಯವಾಗಲಿ!

ಲಕ್ಷ್ಮಣ—ಹನೂಮಾನ್! ನಿನಗೆ ಶಕ್ತಿಯಿರುವುದಾದರೆ ಆರ್ಯನು ಹೇಗೆ ಅಪ್ಪಣೆ ಮಾಡುತ್ತಿರುವನು.

ಹನೂಮಾನ್—ಈ ವಿಷಯದಲ್ಲಿ ಕುಮಾರನು ಯೋಚಿಸುವುದೇಕೆ?

ಲಕ್ಷ್ಮಣ—ನನ್ನ ಯೋಚನೆಯು ವ್ಯರ್ಥವಾದುದು; ಅಥವಾ, ಆರ್ಯನ ಮನೋವೃತ್ತಿಯನನುಸರಿಸುವವರಲ್ಲವೆ! ಸರಿ, ನಡೆ, ಹೋಗುವೆವು.

ಹನೂಮಾನ್—ಕುಮಾರನಪ್ಪಣೆಯಂತೆಯೇ. (ಹೋಗುವರು)

ಲಕ್ಷ್ಮಣ—(ಬಂದು) ಪೂಜ್ಯನು ಪ್ರಸನ್ನನಾಗಬೇಕು! ಅಚ್ಚರಿಯಚ್ಚರಿಯು! ಆರ್ಯನೆ! ಅರಳಿದ ತಾವರೆಯ ಸರಕ್ಕೆ ಜೋಡಿಯಾದ ಆರ್ಯ ಯಾದರೆ—

ಕಂ॥ ಬರಿದೆಸಗಿ ನಿನ್ನ ಜಸಮುಂ।
ತೊರೆವುತೆ ಬಾಟ್ಬಾಸೆಯುಂ ದಲೀಗಳ್ ಪುಗುಗುಂ॥
ಉರಿದುಕರ್ಬನ ಕಿರ್ಚಂ ತಾ।
ಮರೆ ಬನಮನದೆಂತುಟೆಂಚೆಯುಂತುಟು ನಲವಿಂ ॥ ೨೪ ॥

ರಾಮ—ಆಶ್ಚರ್ಯವಾಶ್ಚರ್ಯವು! ಲಕ್ಷ್ಮಣ! ನಿರೋಧಿಸು, ನಿರೋಧಿಸು!

ಲಕ್ಷ್ಮಣ—ಆರ್ಯನಾಜ್ಞೆ! (ಹೋಗುವನು)

ಹನೂಮಾನ್—(ಬಂದು) ಸ್ವಾಮಿಗೆ ಜಯವಾಗಲಿ!

ಕಂ॥ ಮಾಸಲ್ದೇವಿಯರೀಗಳ್ ।
ಕೇಸಂರಿವೊಕ್ಕಮನು ತೋರ್ಪುಗೆಡದೆಯೆ ಪೊಳೆಪಿಂ॥
ಸಾಸಿರ್ಮಡಿ ಮಿಕ್ಕು ಕರಂ।
ಭಾಸಿಕುಗುಂ ಪುಟಮನಾಂತ ಪೊನ್ನಿನ ತೆಜದಿಂ ॥ ೨೫ ॥

ರಾಮ—(ವಿಸ್ಮಯದಿಂದ) ಏನು! ಏನು!

ಲಕ್ಷ್ಮಣ—(ಬೆರಗುತಂದು) ಅಹಹಾ! ಅಚ್ಚರಿಯು!

ಸುಗ್ರೀವ—(ಒಳಪೊಕ್ಕು) ಸ್ವಾಮಿಗೆ ವಿಜಯವಾಗಲಿ!

ಕಂ॥ ಅರರೆ ಅದಾವನಿವಂ ಕಾ ।
ಲ್ಗೆರಗಲ್ಕುಚಿತ ಸ್ವರೂಪನಿದೆ ಕೊಳ್ ಶುಭಮಿ ॥
ರ್ಪರಗುವರೆ ಸೀತೆವಿಡಿದೆ ।
ಯ್ತರುತಿರ್ದಪನಲ್ತೆ ಅಗ್ಗಿಯತ್ತಣಿಸೀಗಳ್ ॥ ೨೬ ॥

ಲಕ್ಷ್ಮಣ—ಓಹೊ! ಭಗವಂತನಾದ ಅಗ್ನಿದೇವನು ಪೂಜ್ಯೆಯನ್ನು ಮುಂದು ಮಾಡಿಕೊಂಡು ಇತ್ತಲಾಗಿಯೇ ಬರುತ್ತಿರುವನು.

ರಾಮ—ಅಹುದು. ಈತನು ಪೂಜ್ಯನಾದ ಯಜ್ಞಪುರುಷನು. ನಡೆಯಿರಿ, ಹತ್ತಿರ ಹೋಗುವೆವು. (ಎಂದೆಲ್ಲರೂ ಮುಂದೆ ಹೋಗುವರು)

[ಆಮೇಲೆ ಸೀತೆಯನ್ನು ಎತ್ತಿಕೊಂಡು ಅಗ್ನಿಯು ಪ್ರವೇಶಿಸುವನು]

ಅಗ್ನಿ—ಈತನು ಭಗವಂತನಾದ ನಾರಾಯಣನು. ದೇವ! ಜಯವಾಗಲಿ!

ರಾಮ—ಭಗವನ್! ನಿನಗೆ ನಮಸ್ಕಾರವು.

ಅಗ್ನಿ—ದೇವೇಶನು ನನಗೆ ನಮಸ್ಕಾರವನ್ನು ಮಾಡಬಾರದು.

ಕಂ॥ ಪುರುಷೋತ್ತಮ ಕರುಣಾ ನಿಧಿ ।
ಅರಸಾ ಸ್ವೀಕರಿಸ ಸಕಲ ಭೂ ವಿನಮಿತೆಯಂ ॥
ಕರೆಯಿಲಿಯಂ ಸುಚರಿತೆಯಂ ।
ನಿರುಪಮೆಯಂ ಮೇಣ್ ಪುನೀತೆಯಂ ಜಾನಕಿಯಂ ॥ ೨೭ ॥

ಮತ್ತಂ—

ಕಂ॥ ಈ ನಿಮಿ ವಂಶೋದ್ಭವೆಯುಂ ।
ಜಾನಕಿಯುಂ ಲೋಕ ಮಾತೆ ಲಕ್ಷ್ಮಿಯೆನುತ್ತುಂ ॥
ನೀನಱಿಯೆ ತಾನಿೀಗಳ್ ।
ಮಾನುಷ ವಪುವಿಂದೆ ಸಾರ್ದಪಳ್ ಗಡ ನಿನ್ನಂ ॥ ೨೮ ॥

ರಾಮ—ಅನುಗೃಹೀತನಾದೆನು.

ಕಂ॥ ಭಗವಂತ ಹವ್ಯವಾಹನ ।
ಮೃಗಾಕ್ಷಿಯಿಾ ಸೀತೆ ಪೂತೆಯೆಂಬುದನಱಿದುಂ ॥
ಜಗದೊಂದೊಪ್ಪಿಗೆಗಾಗಿಯೆ ।
ಮಿಗೆ ಮನದಂದಿಂತುಟೀಗಳೆಸಗಿದೆನಕ್ಕುಂ ॥ ೨೯ ॥

[ತೆರೆಯಲ್ಲಿ ದೇವ ಗಂಧರ್ವರು ಗಾನ ಮಾಡುವರು]

ಮೂರು ಲೋಕಗಳಿಗೆ ಕಾರಣನಾದ ಭಗವಂತ ನಾರಾಯಣನಿಗೆ ನಮಸ್ಕಾರವು!

ಮ॥ ಬಿದಿ ತಾಂ ನಿನ್ನೆರ್ದೆ ಮೇದಿನೀತ್ರಯ ವಿಭೂ ರುದ್ರಂ ನಿನತ್ತಾಗ್ರಹಂ ।
ಬಿದು ನೇಸರ್ ನಿನತಚ್ಚಿಗಳ್ ಸುರಪತೀ ತ್ವಜ್ಜಿಹ್ವೆ ವಾಗ್ದೇವಿ ನೀಂ ॥
ತ್ರಿದಶಜ್ಯೇಷ್ಠ ಸುರೇಂದ್ರ ನಿರ್ಜರರುಮಂ ಮೂಲೋಕಮಂ ಗೆಯ್ದವಂ ।
ಸದಯಾ! ಸೀತೆಯಿವಳ್ ಸರೋಜಗೃಹೆ ನೀಂ ಶ್ರೀಶಂ ಗದಾ ನಿಕ್ಕಮಂ ॥ ೩೦ ॥

[ಮರಳಿ ತೆರೆಯಲ್ಲಿ ಇತರರು ಗಾನ ಮಾಡುವರು]

ಮ॥ ಜಲದೊಳ್ ಭೂತಲಮುಟ್ಟಿರಲ್ ಗಳ ವರಾಹಾಕಾರದಿಂದೆತ್ತಿದೈ ।
ನಲವಿಂದಾಹ ಅಡಂಗಿತಲ್ತೆ ನಿನತಾ ಮೂವಜ್ಜೆಯೊಳ್ ಮೂಜಗಂ ॥
ಸಲೆ ಸ್ಥಿತಿಂತುಟು ನೀಂ ತ್ವದಿಚ್ಛೆಗೊಲಿದಾ ರೂಪಿಂದೆಯಿಾ ಯುದ್ಧದೊಳ್ ।
ಖಲನಂ ಕೊಂದು ಸುರರ್ಕಳಂ ಸಲಹಿದಂತಿಲ್ಲಿನ್ನುಮಿಾ ದೇವಿಯುಂ ॥ ೩೧ ॥

ಅಗ್ನಿ—ಭದ್ರಮುಖ! ಇದೊ! ದೇವತೆಗಳು ದೇವರ್ಷಿಗಳು ಸಿದ್ಧರು ವಿದ್ಯಾಧರರು ಗಂಧರ್ವರು ಮುಂತಾಗಿ ಸರ್ವರೂ ತಮ್ಮ ವೈಭವಂಗಳಿಂದ ನಿನ್ನನ್ನು ಕೀರ್ತಿಸುತ್ತಿರುವರು.

ರಾಮ—ಅನುಗೃಹೀತನಾದೆನು.

ಅಗ್ನಿ—ಭದ್ರಮುಖ! ಪಟ್ಟಾಭಿಷೇಕಾರ್ಥವಾಗಿ ಹೀಗೆ ವಿಜಯ ಮಾಡಿಸಬೇಕು.

ರಾಮ—ಭಗವಂತನಾಜ್ಞೆ! (ತೆರಳುವರು)

[ತೆರೆಯುಲ್ಲಿ]

ಜಯವಾಗಲಾರ್ಯನಿಗೆ! ವಿಜಯವಾಗಲಿ ಸ್ವಾಮಿಗೆ! ಶುಭವಾಗಲಿ ಮಂಗಳಾಂಗನಿಗೆ! ಮಹಾರಾಜನಿಗೆ ಮಂಗಳವಾಗಲಿ! ರಾವಣಾಂತಕನಿಗೆ ಕೀರ್ತಿ ವೆಗ್ಗಳಿಸಲಿ! ಆಯುಷ್ಮಂತನಿಗೆ ಚಿರಜೀವಿತವಾಗಲಿ!

ವಿಭೀಷಣ—ಈತನು, ಈ ಮಹಾರಾಜನು—

ಕಂ॥ ಧುರದೊಳ್ ಶಪಥಾಬ್ಧಿಯನು ।
ತ್ತರಿಸೀಗಳ್ ಪಾಪ ರಹಿತೆ ದೇವಿಯ ಸಹಿತಂ ॥
ಸುರರನಿಬರಿಂನಭಿಷೇಕಮು ।
ಸಿರದಾಂತೆಸೆದಪ್ಪನಮಲ ನಭದೊಳ್ ಪೆಜೆವೋಲ್ ॥ ೩೨ ॥

ಲಕ್ಷ್ಮಣ—ಆಶ್ಚರ್ಯವು ಆರ್ಯನ ವೈಷ್ಣವ ತೇಜಸ್ಸು!

ಕಂ॥ ಯಮ ವರುಣ ಕುಬೇರೇಂದ್ರಾ ।
ದ್ಯಮರ ಗಣಂ ಬರಿದು ಮೆಜೆಗುಮಯ್ಯನ ಮಾತಿಂ ॥
ದಮಮಃ ಅಭಿಷಿಕ್ತನಾರ್ಯಂ ।
ಸುಮನಸ ರಾಜತ್ವಮಾಂತ ವೃತ್ರಾರಿಯವೋಲ್ ॥ ೩೩ ॥

[ಆಮೇಲೆ ಪಟ್ಟಾಭಿಷಿಕ್ತನಾದ ರಾಮನು ಸೀತೆಯೊಡನೆ ಪ್ರವೇಶಿಸುವನು]

ರಾಮ—ವತ್ಸ! ಲಕ್ಷ್ಮಣ!

ಮ॥ ಮಡಿನೂಲ್ಗಟ್ಟಸಿ ಮಂಗಳಾರ್ಥಮೊಲವಿಂ ಭದ್ರಾಸನಂ ಮೆಟ್ಟಿಪಾ ।
ಯೆಡೆ ತಾಯ್ನಲ್ಮೆಗೆನತ್ತು ಮೇಲ್ಮೆಯೆಸಗಲ್ಕಾಗಳ್ ತೊಡರ್ದ್ದಂದನೋ ॥
ಒಡಲಂ ತೆತ್ತನೊ ದೈವಕಾ ದಶರಥಂ ತಾನಿಂದು ಮೆಯ್ದೋಜ್ಜಿ ಮು ।
ಮ್ಮಡಿ ಸುಮ್ಮಾನದೆ ಮಾಡಿದಂ ಮಗುಬ್ಜಿ ಪಟ್ಟಂಗಟ್ಟವುದ್ಯೋಗಮಂ॥೩೪॥

ಅಗ್ನಿ—ಮಂಗಳಮುಖನೆ! ಮಹೇಂದ್ರನಪ್ಪಣೆಯಂತೆ ಭರತ ಶತ್ರುಘ್ನರಿಂದೊಡಗೂಡಿದ ಪ್ರಜೆಗಳು ನಿನ್ನನ್ನು ಸಾರುತ್ತಿರುವರು.

ರಾಮ—ಭಗವನ್! ಬಹಳ ಸಂತೋಷವು.

ಅಗ್ನಿ—ಇದೊ ಮಹೇಂದ್ರನೇ ಮೊದಲಾದ ಅಮೃತಾಶನರು ನಿನಗೆ ಮೇಲ್ಮೆಯನ್ನು ಕೋರುತ್ತಿರುವರು!

ರಾಮ—ಅನುಗೃಹೀತನಾದೆನು.

ಅಗ್ನಿ—ಭದ್ರಮುಖ! ಪುನಃ ನಿನಗಿನ್ನಾವ ಪ್ರಿಯವನ್ನೆಸಗುವೆನು?

ರಾಮ—ಭಗವಂತನು ಪ್ರಸನ್ನನಾಗಿರುವಾಗ ನಾನು ಇದಕ್ಕಿಂತ ಹೆಚ್ಚು ಏನು ಬಯಸುವೆನು!

(ಭರತ ವಾಕ್ಯಂ)

ಕಂ॥ ಗೋಗಳ್ ರಜಸ್ಸನುಳಿದಿ ।
ರ್ಕೇಗಳ್ ಪರಚಕ್ರಮಿರ್ಕೆ ಶಾಂತಿಯಿನನಿಶಂ ॥
ಈಗಳಿನೀ ಯಿಳೆಯನಿತಂ ।
ರಾಗದಿನಾಳ್ಗಿಮ್ಮ ರಾಜಸಿಂಹಂ ನಿರುತಂ ॥ ೩೩ ॥

(ಎಲ್ಲರೂ ತೆರಳುವರು)

ಸಂಪೂರ್ಣಂ.

ಭದ್ರಂ ಶುಭಂ ಮಂಗಳಂ

ಪದ್ಯಗಳ ಅಕ್ಷರಾನುಕ್ರಮಣಿಕಾಪಟ್ಟಿ.

ಪದ್ಯ ಸಂಖ್ಯೆ	ಪದ್ಯಗಳಾದಿ	ಅಂಕ, ಪದ್ಯಗಳ ಸಂಖ್ಯೆ	ಪದ್ಯಗಳ ಹೆಸರು
26	ಇಕ್ಷ್ವಾಕು ವಂಶ ದೀಪನ	೨—೨೦	ಕಂದ
27	ಇನ ಕುಲ ಸಂಭವ	೨—೧೫	,,
28	ಇರಿದುಂ ವಾನರರಾಜನಂ	೨—೨೨	ಮತ್ತೇಭವಿಕ್ರೀಡಿತ
29	ಇವರಲ್ತೆಮ್ಮಯ	೪—೧೯	ಕಂದ
30	ಇವರಾ ರಕ್ಕಸರಾಯಂಗೆ	೪—೨೦	,,
31	ಇವರಂ ದಂಡಿಪುದರಿಸೆನಗೆ	೪—೨೧	,,
32	ಇವಳೇ ಮೈಥಿಲಿ	೨—೧೩	,,
33	ಇವೆ ಸೋಟಿಪ್ಪುದು	೫—೮	,,
34	ಇಳೆಯಧಿನಾಥ ಧರ್ಮಗಳ್	೧—೧೭	ಚಂಪಕಮಾಲೆ
35	ಈ ನಿಮಿ ವಂಶೋದ್ಭವೆ	೬—೨೮	ಕಂದ
36	ಈರೈದುದಲೆಯ	೬—೮	,,
37	ಉಣಿಸಂ ಬಿಟ್ಟು	೨—೨೧	ಮತ್ತೇಭವಿಕ್ರೀಡಿತ
38	ಎಡಗೆಯ್ಯೊಳ್ ಧನುವಾಂತು	೬—೭	,,
39	ಎನ್ನಪಕೃತಿಯಂ	೧—೨೬	ಕಂದ
40	ಎನ್ನಯ ಬಾಣ ಪಾತ ಹತಿಯಿಂ	೧—೪	ಉತ್ಪಲಮಾಲೆ
41	ಎಲ್ಲೆಡೆಯೊಳ್	೩—೨೩	ಕಂದ
42	ಒಡವುಟ್ಟಿದ	೩—೨೫	,,
43	ಒಡೆಯನೆ ಕೇಳ್	೪—೯	,,
44	ಒಳಹೊರಗೋಣೆಗಳ್	೨—೪	ಚಂಪಕಮಾಲೆ
45	ಕಡುಕೂರಾದ	೬—೧೫	ಮತ್ತೇಭವಿಕ್ರೀಡಿತ
46	ಕಣೆಯಂ ತುಂಡರಿಸುವ	೬—೧೩	ಕಂದ
47	ಕಣೆಯಂ ವಾನರ ಸೈನ್ಯದೊಳ್	೬—೫	ಮತ್ತೇಭವಿಕ್ರೀಡಿತ
48	ಕನಕದೆ ಗೆಯ್ದು	೨—೨	ಚಂಪಕಮಾಲೆ
49	ಕನಕಂ ಪವಳಂ	೨—೫	ಕಂದ
50	ಕಲಹದೊಳಿಂದ್ರಜಿತಂ	೫—೧೦	,,
51	ಕಲಿಗಳ ತಿಲಕನ	೩—೨೧	,,
52	ಕಿನಿಸಿಂ ಕಣ್ಕೆಂಕಮಾಗಲ್	೩—೭	ಮಹಾಸ್ರಗ್ಧರೆ
53	ಕುವರಂ ಕಣೆಯೊಳ್	೩—೬	ಕಂದ
54	ಕುವರಂಗಂ ಕೋಡಗಕಂ	೩—೧೦	,,
55	ಕೊರಸಿಯಂ ಕರಂ ಪಿಡಿದು	೬—೪	ಉತ್ಪಲಮಾಲೆ

ಪದ್ಯ ಸಂಖ್ಯೆ	ಪದ್ಯಗಳಾದಿ	ಅಂಕ, ಪದ್ಯಗಳ ಸಂಖ್ಯೆ	ಪದ್ಯಗಳ ಹೆಸರು
56	ಕೆಲವೆಡೆ ಫೇನದುರ್ಬುರ್	೪—೧೭	ಚಂಪಕಮಾಲೆ
57	ಕೋಗಿಲೆವಿಂಡಿನಿಂ	೨—೨೩	ಉತ್ಪಲಮಾಲೆ
58	ಕೋಪಮನೊಂದಿದಾವನಿದಿರೊಳ್	೪—೭	,,
59	ಖಗಪತಿಯಿಂದೆ ಕೇಳ್ವು	೨—೧	ಚಂಪಕಮಾಲೆ
60	ಖರ ಮರುದುದ್ಧತದಿಂ	೧—೨	ಕಂದ
61	ಖಳನಳಿದುದ	೬—೧೮	,,
62	ಗಾಧಿ ಕುಮಾರ	೧—೧	ಉತ್ಪಲಮಾಲೆ
63	ಗಿರಿ ತುರು ಪಿಡಿ ಪಲ್	೪—೬	ಕಂದ
64	ಗುರುವಾದೆನ್ನಿನಿಯಳ	೧—೨೧	,,
65	ಗೋಗಳ್	೬—೩೫	,,
66	ಜಲದೊಳ್ ಭೂತಲ	೬—೩೧	ಮತ್ತೇಭವಿಕ್ರೀಡಿತ
67	ಜಲಯುಕ್ತಾಭ್ರದಪೋಲ್	೯—೩	,,
68	ತನುಗೆಯ್ದೆಯ್ದೆ	೬—೧೬	,,
69	ತನುಜಾತನಿಂದ್ರಜೇತಂ	೫—೧೪	ಕಂದ
70	ತರು ಗಿರಿ ಘಾತ	೬—೩	ಚಂಪಕಮಾಲೆ
71	ತರು ಯೋಧಿ	೩—೫	ಕಂದ
72	ತವೆ ಕರ್ಚಿಪೊರ್ಡಿನಿಂ	೧—೧೩	ಮಹಾಸ್ರಗ್ಧರೆ
73	ತಾರಗೆವಟ್ಟೆ	೪—೧೩	ಉತ್ಪಲಮಾಲೆ
74	ತಾವರೆಗಣ್ಣನಂ	೩—೨೭	,,
75	ತುಳಿಲಾಳ್ಗೆನಕ್ಕೆ	೩—೯	ಕಂದ
76	ಪುಳಿಲೊಳ್ ನಿನ್ನ ಕುಮಾರನಂ	೫—೧೫	ಮತ್ತೇಭವಿಕ್ರೀಡಿತ
77	ತೊಡುವೆನ್ನ ಶರಾಸಿಲನಿಂ	೪—೧೮	ಕಂದ
78	ದನುಜರ್ ಪ್ರಹಸ್ತ	೫—೨	,,
79	ದನುಜ ವಿನಾಶಕ	೬—೧೨	,,
80	ದುರುಳಂ ರಕ್ಕಸ	೩—೧೪	,,
81	ದೇವನೊಳಾವದೆಂಟು	೪—೧೦	ಉತ್ಪಲಮಾಲೆ
82	ಧನಪತಿಯುಂ ತಗುಳ್ದಿ	೫—೪	ಚಂಪಕಮಾಲೆ.
83	ಧರೆಯಿಂ ದೂಡಿದ	೧—೩	ಕಂದ
84	ಧುರದೊಳ್ ಕ್ರುದ್ಧ ಸುರೇಭ	೨—೧೦	ಮತ್ತೇಭವಿಕ್ರೀಡಿತ
85	ಧುರದೊಳ್ ಶಪಥಾಬ್ಧಿಯ	೬—೩೨	ಕಂದೆ

ಪದ್ಯಸಂಖ್ಯೆ	ಪದ್ಯಗಳಾದಿ	ಅಂಕ, ಪದ್ಯಗಳ ಸಂಖ್ಯೆ	ಪದ್ಯಗಳ ಹೆಸರು
86	ಧೃತ ಶಾರ್ಙ್ಗ	೮—೧೪	ಕಂದ
87	ನನೆವಿಲ್ಲಂಗೊಳಗಾಗಿ	೫—೩	ಮತ್ತೇಭವಿಕ್ರೀಡಿತ
88	ನಾಕಿಗಳುಮನಸುರರುಮಂ	೫—೧೨	ಕಂದ
89	ನಿನ್ನಯ ತೋಳ್ಗಳ	೬—೨೧	,,
90	ನೀರಾಂತ ಮುಗಿಲ	೮—೫	,,
91	ನುಡಿಗೊಂಡತ್ತಿಗೆ	೬—೨೩	,,
92	ನೃಪ ವರ ಭುಜ ರಕ್ಷಿತರಾಂ	೧—೭	,,
93	ನೆರೆ ಧರ್ಮಾಧರ್ಮಂಗಳ	೧—೨೦	,,
94	ನೆರೆ ಮೂಲೋಕಂಗಳಂ	೩—೧೨	ಮಹಾಸ್ರಗ್ಧರೆ
95	ಪಗೆಯುಂ ಕೊಲ್ಲಲ್ಕೆಯೆ	೪—೪	ಕಂದ
96	ಪಗೆವನೆಯೊಳಿರ್ದಳಾಯೆಡೆ	೬—೨೦	,,
97	ಪಡುಮಲೆ ಕೋಡನೇರಿ	೮—೨೩	ಚಂಪಕಮಾಲೆ
98	ಪತಿವತ್ಸಲೆ	೨—೨೪	ಕಂದ
99	ಪರಶಿವನೊಳೆ	೩—೧೬	,,
100	ಪರಿದುದು ಭೀತಿ	೧—೬	,,
101	ಪುರುಷೋತ್ತಮ	೬—೨೭	,,
102	ಬರಿದಾಗುತೆ ಶಕ್ತ್ಯಾಯುಧ	೬—೯	,,
103	ಬರಿವೆಸಗಿ ನಿನ್ನ ಜಸಮಂ	೬—೨೪	,,
104	ಬಲವಂತದಿನತಿ	೫—೫	,,
105	ಬಲೆಯುಂ ಸೇರಿದ	೧—೧೯	,,
106	ಬಳಸಿರ್ದಾ ಸಾನು ಕುಂಜಂ	೮—೨	ಮಹಾಸ್ರಗ್ಧರೆ
107	ಬಳಿಗುಡದಿರಲೆನಗೆ ಕಡಲ್	೪—೧೨	ಕಂದ
108	ಬಹು ವಿಧದಿಂ	೩—೧೩	,,
109	ಬಿಡುಗಣ್ಣರು	೩—೧೧	,,
110	ಬಿಡು ಬಿಡು ಭಾವಮು	೫—೯	,,
111	ಬಿಡು ಭಾಮಿನಿ	೨—೧೮	,,
112	ಬಿಡುಯೆನ್ನರಿವೆಯ	೧—೯	,,
113	ಬಿದಿ ತಾಂ ನಿನ್ನೆರ್ದೆ	೬—೩೦	ಮತ್ತೇಭವಿಕ್ರೀಡಿತ
114	ಬಿಲ್ಲೊಳ್ ಕೊರ್ಗಣೆ	೫—೧೭	ಕಂದ
115	ಭಗವಂತ ಹವ್ಯವಾಹನ	೬—೨೯	,,

ಪದ್ಯ ಸಂಖ್ಯೆ	ಪದ್ಯಗಳಾದಿ	ಅಂಕ, ಪದ್ಯಗಳ ಸಂಖ್ಯೆ	ಪದ್ಯಗಳ ಹೆಸರು
116	ಭೋಗಮನೆನ್ನುಮ	೨—೧೨	ಕಂದ
117	ಮಣಿಯಿಂದೊಪ್ಪುವ	೨—೯	ಮತ್ತೇಭವಿಕ್ರೀಡಿತ
118	ಮಣಿಯಿಂದೊಪ್ಪುವ	೪—೧೫	,,
119	ಮದದಿಯನಪಹರಿಪುದಱಿಂ	೩—೨೨	ಕಂದ
120	ಮದದಿಯನೆನ್ನವಳಂ	೪—೨೨	,,
121	ಮಡಿನೂಲ್ಗಟ್ಟಿಸಿ	೬—೩೪	ಮತ್ತೇಭವಿಕ್ರೀಡಿತ
122	ಮನ್ನಿಪುದರಸಾ	೩—೧೯	ಕಂದ
123	ಮಲೆವೈರಾವತ	೫—೧೬	ಮತ್ತೇಭವಿಕ್ರೀಡಿತ
124	ಮಿಗಮೆನಿಪುದು	೩—೨೦	ಕಂದ
125	ಮಿರುಪ ರಥಂಗಳೊಳ್	೬—೧೪	ಚಂಪಕಮಾಲೆ
126	ಮಿಸುನಿಯ ಕಾವನಾಂತು	೬—೬	,,
127	ಮಿಾಸಲ್ದೇವಿಯರೀಗಳ್	೬—೨೫	ಕಂದ
128	ಮೆರೆವಿಕ್ಷ್ವಾಕು ನರೇಂದ್ರ	೬—೧	ಮತ್ತೇಭವಿಕ್ರೀಡಿತ
129	ಮೊನೆ ಮೊದಲೊಳ್	೬—೧೧	ಚಂಪಕಮಾಲೆ
130	ಯಮ ವರುಣ	೬—೩೩	ಕಂದ
131	ರಣದೊಳ್ ಮೂಲೋಕನು	೩—೪	,,
132	ರವಿ ವೈಶ್ವಾನರ	೬—೧೭	ಮತ್ತೇಭವಿಕ್ರೀಡಿತ
133	ರಾವಣ ಧಾರಾಧರದಿಂ	೬—೧೦	ಕಂದ
134	ರಾವಣನಂ ನಾಂ ಕೊಂದೊಡೆ	೨—೧೬	,,
135	ರುಧಿರಂಬೆತ್ತ ಘನಾಘನಂ	೧—೧೬	ಮತ್ತೇಭವಿಕ್ರೀಡಿತ
136	ವರ ಚಾಪ ಹಸ್ತನಂ	೨—೨೫	ಕಂದ
137	ವರ ತನು ತನು ಗಾತ್ರಿ	೨—೧೭	,,
138	ವರ ರಾಜಲಕ್ಷ್ಮಿಯಂ	೨—೩	,,
139	ವರ ರೂಪ್ಯ ರಚಿತ	೨—೧೧	,,
140	ವರ ವಿಮಲ ಕಮಲ	೩—೨	,,
141	ವರ ಸೀತಾನನಮಂ	೫—೬	ಮತ್ತೇಭವಿಕ್ರೀಡಿತ
142	ವಾನರ ಯುಕ್ತಾಧಿಪ	೧—೨೩	ಕಂದ
143	ವಿಧುಮುಖಿ! ಎನ್ನ ವೈರಿಗೆ	೧—೧೨	ಚಂಪಕಮಾಲೆ
144	ಶ್ರೀ ಗೌರೀ	೧	ಶಾರ್ದೂಲವಿಕ್ರೀಡಿತ
145	ಸರಳಿಂ ನೋಯಿಸಿ	೬—೧೯	ಮತ್ತೇಭವಿಕ್ರೀಡಿತ

ಪದ್ಯ ಸಂಖ್ಯೆ	ಪದ್ಯಗಳಾದಿ	ಅಂಕ, ಪದ್ಯಗಳ ಸಂಖ್ಯೆ	ಪದ್ಯಗಳ ಹೆಸರು
146	ಸಲೆ ಕಂಡೆಂ ಸುವಿಚಿತ್ರ	೨—೬	ಮತ್ತೇಭವಿಕ್ರೀಡಿತ
147	ಸಲೆ ದಿವ್ಯಾಸ್ತ್ರಂಗಳಿಂದಂ	೩—೧೭	ಮಹಾಸ್ರಗ್ಧರೆ
148	ಸಲೆ ಸೌಮ್ಯಾಕೃತಿಯಿಂ	೧—೧೮	ಕಂದ
149	ಸವಿಕೃತಿ ರೂಪಿಣಿಯರ್	೨—೭	,,
150	ಸುರ ನಾಥಂ ಶರಣಕ್ಕೆಮ	೧—೧೨	,,
151	ಸುರಪಾದಿ ದೇವರುಂ	೨—೧೮	,,
152	ಸ್ಕಂಧ ಮಹಾ ಶಕ್ತ್ಯಾಯುಧ	೧—೨೪	,,
153	ಹರಿ ವರ ಸಾಮಜೇಂದ್ರಗಮನಾ	೧—೨೨	ಚಂಪಕಮಾಲೆ
154	ಹಾ ಕಂದ ಲೋಕ ಭೀಕರ	೫—೧೩	ಕಂದ
155	ಹಿಮಗಿರಿ ಕೂಟದಂತೆ	೧—೫	ಚಂಪಕಮಾಲೆ

			ಪದ್ಯ ಸಂಖ್ಯೆ
1. ಶಾರ್ದೂಲವಿಕ್ರೀಡಿತ	೧	ಪ್ರಥಮಾಂಕ	೨೭
2. ಮತ್ತೇಭವಿಕ್ರೀಡಿತ	೨೩	ದ್ವಿತೀಯಾಂಕ	೨೬
3. ಉತ್ಪಲಮಾಲೆ	೯	ತೃತೀಯಾಂಕ	೨೭
4. ಚಂಪಕಮಾಲೆ	೧೯	ಚತುರ್ಥಾಂಕ	೨೩
5. ಮಹಾಸ್ರಗ್ಧರೆ	೫	ಪಂಚಮಾಂಕ	೧೭
6. ಕಂದ	೯೮	ಷಷ್ಠಾಂಕ	೩೫
	೧೫೫	ಒಟ್ಟು	೧೫೫